LEGISLATIVE ASSEMBLY.

NINETEENTH DAY.

Thursday, 5th April, 1951.

The Assembly met in the Assembly Hall, Old Public Offices, Bangalore, at Seven Minutes past Eight of the Clock.

Mr. Speaker (The Hon'ble Sri V. Venkatappa) in the Chair.

STARRED QUESTIONS.

(to which oral answers were given).

Repair of Tarikere–Lakkavalli Road

*ಪ್ರಶ್ನೆ 221.—ಶ್ರೀ ಎಲ್. ಎಚ್. ತಿಮ್ಮಾಬೋಯಿಯವರು (ಚಿಕ್ಕಮಗಳೂರು—ನಿಮ್ನ ಪಂಗಡ).—

ಈ ಕೆಳಗೆ ಕೇಳಿರುವ ಸಂಗತಿಗಳನ್ನು ಸರ್ಕಾರದವರು ದಯೆಯಿಟ್ಟು ತಿಳಿಸಬೇಕೆಂದು ಪ್ರಾರ್ಥನೆ:—

(a) ತರೀಕೆರೆ-ಲಕ್ಕವಳ್ಳಿ ರಸ್ತೆಯು ಕೆಟ್ಟುಹೋಗಿರುವುದೂ ಮತ್ತು ಹೀಗೆ ರಸ್ತೆಯು ಕೆಟ್ಟುಹೋಗಿರುವುದರಿಂದ ಅಲ್ಲಿ ಓಡಾಡತಕ್ಕ ವಾಹನಗಳು ಪ್ರತಿದಿವಸವೂ ಅಪಘಾತಗಳಿಗೆ ಗುರಿಯಾಗಿ ಮುರಿದು ಹೋಗುತ್ತಿರುವುದರಿಂದ ವಾಹನಗಳ ಮಾಲೀಕರುಗಳಿಗೆ ಅಧಿಕವಾದ ನಷ್ಟವುಂಟಾಗುತ್ತಿರುವುದೂ ಸರ್ಕಾರದ ಗಮನಕ್ಕೆ ಬಂದಿದೆಯೆ ;

(b) ಈಗ ಅಲ್ಲಿ ಸಂಚಾರಮಾಡುತ್ತಿರುವ ಸ್ಟಾರ್ವ ಜನಿಕರುಗಳ ವಾಹನಗಳ ಮತ್ತು 'ಪ್ರಾಜೆಕ್ಟ್'ಗಳ ವಾಹನಗಳ ಓಡಾಟದ ಒತ್ತಡವನ್ನು ಆ ರಸ್ತೆಯು ತಡೆಯಬಲ್ಲುದೆ ;

(c) ಲಕ್ಕವಳ್ಳಿ 'ಪ್ರಾಜೆಕ್ಟ್' ಡಿವಿಜನ್ನಿನವರು ಆ ರಸ್ತೆಯ ಚಾರ್ಜನ್ನು ವಹಿಸಿಕೊಳ್ಳುವುದು ಅವಶ್ಯಕವಾಗಿಲ್ಲವೆ ;

(d) ಮೊದಲು, ಎಂದರೆ, ಸುಮಾರು ಐದಾರು ತಿಂಗಳುಗಳ ಹಿಂದೆ, ಆ ರಸ್ತೆಯು 'ಪ್ರಾಜೆಕ್ಟ್' ಡಿವಿಜನ್ನಿನ ಚಾರ್ಜಿನಲ್ಲರಲಲ್ಲವೆ ;

(e) ಆ ರಸ್ತೆಯನ್ನು ಪುನಃ 'ಪ್ರಾಜೆಕ್ಟ್' ಡಿವಿಜನ್ನಿಗೆ ವಹಿಸಿಕೊಟ್ಟು ಆದಕ್ಕೆ ಸರಿಯಾದ ದುರಸ್ತಿಗಳನ್ನು ಮಾಡಿಸುವುದಕ್ಕೆ ಸರ್ಕಾರದವರು ಕೂಡಲೆ ಕಾರ್ಯಕ್ರಮವನ್ನು ಕೈಕೊಳ್ಳುವರೆ ?

ಉತ್ತರ.—ಮಾನ್ಯ ಶ್ರೀ ಟಿ. ಮರಿಯಪ್ಪನವರು (ಒಳಾಡಳಿತ ಸಚಿವರು).—

(a) ಲಕ್ಕವಳ್ಳಿ 'ಪ್ರಾಜೆಕ್ಟ್' ಯೋಜನೆಯ ಕೆಲಸವು ನಡೆಯುತ್ತಿರುವುದರಿಂದ ಆ ರಸ್ತೆಯಲ್ಲಿ ಸಾಮಾನ್ಯವಾಗಿ ವಾಹನಗಳ ಓಡಾಟವು ಬಹಳವಾಗಿ ಹೆಚ್ಚಿದೆ ಮತ್ತು ಇದರ ಪರಿಣಾಮವಾಗಿ ರಸ್ತೆಯು ಸವೆದು ಕೆಟ್ಟುಹೋಗುತ್ತದೆ. ವಾಹನಗಳು ಮುರಿದುಹೋಗಿರತಕ್ಕ ಯಾವ ಸಂದರ್ಭಗಳೂ ವರದಿಯಾಗಿಲ್ಲ.

(b) ಹೌದು, ರಸ್ತೆಯ ಮೇಲ್ಛಾಗವನ್ನು ಉತ್ತಮಗೊಳಿಸಿದರೆ ತಡೆಯಬಲ್ಲುದು.

(c) ಇದು ಅಷ್ಟೊಂದು ಜರೂರಾಗಿ ನಡೆಯಬೇಕಾಗಿಲ್ಲ. ವಿಶೇಷ ರೀತಿಯ ('ಸ್ಪೆಷಲ್') ಗ್ರಾಂಟುಗಳನ್ನೂ ಮತ್ತು ಸಾಧಾರಣ ಗ್ರಾಂಟುಗಳನ್ನೂ ಹೆಚ್ಚಿಸಲಾಗುತ್ತಿದೆ. ಯೋಜನೆಯ ಕಾರ್ಯಕರಾಪಗಳು ಮುಂದುವರಿದಂತೆಲ್ಲ ಕೆಲಸವನ್ನು ಕೈಗೊಂಡು ರಸ್ತೆಯ ಮೇಲ್ಛಾಗಕ್ಕೆ ಮಜಬೂತಾಗಿ ಕಾಮಗಾರಿ ಮಾಡಿಸುವ ಮೂಲಕ ಅದರ ಸ್ವಭಾವವನ್ನು ಉತ್ತಮಗೊಳಿಸಿ ಅದರ ವೆಚ್ಚವನ್ನು 'ಪ್ರಾಜೆಕ್ಟ್' ಯೋಜನೆಯ ಪೊಬಲಗಿಗೆ ಖರ್ಚು ಹಾಕಿನಬೇಕೆಂದು ಉದ್ದೇಶಿಸಲಾಗಿದೆ.

(d) ಇದು ಚಿಕ್ಕಮಗಳೂರು ಡಿವಿಜನ್ನಿನಲ್ಲಿದ್ದಿತು. ರಸ್ತೆಯ ಪಕ್ಕದಲ್ಲಿ ಹೋಗುತ್ತಿದ್ದ 'ಟ್ರಾಂವೇ'ಗಳನ್ನು ಅಲ್ಲ ಇಲ್ಲ ತೆಗೆದುಹಾಕಿದ ತರುವಾಯ ಹಳ್ಳಗಳು ಮೊದಲಾದವನ್ನೂ ಲಕ್ಕವಳ್ಳಿ ಪ್ರಾಜೆಕ್ಟಿನವರ ದುರಸ್ತಿ ಮಾಡಿದರು ಮತ್ತು ಇದನ್ನು ಪುನಃ ಚಿಕ್ಕಮಗಳೂರು ಡಿವಿಜನ್ನಿಗೆ ವಹಿಸಿಕೊಡಲಾಯಿತು. 'ಪ್ರಾಜೆಕ್ಟ್' ಯೋಜನೆಯ ಕೆಲಸವನ್ನು ನಿಧಾನವಾಗಿ ನಡೆಯಿಸಬೇಕೆಂಬ ಕಾರ್ಯಕ್ರಮದ ಮೇರೆಗೆ ('ಗೋ ಸ್ಲೋ–ಪ್ರೋಗ್ರಾಂ' ಮೇರೆಗೆ) 'ಪ್ರಾಜೆಕ್ಟ್' ಯೋಜನೆಯ ವಾಹನಗಳ ಸಂಚಾರವು ಕೂಡಲೆ ಹೆಚ್ಚುವುದಿಲ್ಲ.

(e) ದುರಸ್ತಿ ಕಾಮಗಾರಿಗಳನ್ನು ನಡೆಯಿಸಲು ಅಗತ್ಯವಾದ ಕಾರ್ಯಕ್ರಮವನ್ನು ಕೈಕೊಳ್ಳಲಾಗುವುದು.

ಶ್ರೀ ಎಲ್. ಎಚ್. ತಿಮ್ಮಾಬೋಯಿಯವರು.—ಈ ಲಕ್ಕವಳ್ಳಿ—ತರೀಕೆರೆ ರಸ್ತೆ ಟ್ರಂಕ್ ರೋಡಿಗೇನಾದರೂ ಸೇರಿದೆಯೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಸೇರಿಲ್ಲ.

ಶ್ರೀ ಎಲ್. ಎಚ್. ತಿಮ್ಮಾಬೋಯಿಯವರು.—ಈ ರಸ್ತೆಯ ರಿಪೇರಿಬಗ್ಗೆ ಒಂದು ಫರ್ಲಾಂಗಿಗೆ ತಾವು ಕೊಡುವ ವಾರ್ಷಿಕ ಗ್ರಾಂಟ್ ಎಷ್ಟಾಗಬಹುದು ಸ್ವಾಮಿ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಸುಮಾರು 500 ರೂಪಾಯಿಗಳಾಗಬಹುದು.

ಶ್ರೀ ಎಲ್. ಎಚ್. ತಿಮ್ಮಾಬೋಯಿಯವರು.—ಈ ವರ್ಷ ಈ ರಸ್ತೆ ಬಹಳವಾಗಿ ಕೆಟ್ಟುಹೋಗಿರುವುದರಿಂದ ಇದಕ್ಕೆ ಈ ಸಾಲಿನಲ್ಲಿ ಹೆಚ್ಚಿಗೆ ವಿಶೇಷ ಗ್ರಾಂಟನ್ನು ಒದಗಿಸುತ್ತೀರಾ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಈ ಸಾಲಿನ ಬಡ್ಜೆಟ್ಟಿನಲ್ಲಿ ಅದಕ್ಕಾಗಿ ಸ್ವಲ್ಪ ಹೆಚ್ಚು ಹಣವನ್ನು ತೆಗೆದಿದಲು ಪ್ರಯತ್ನ ಮಾಡಲಾಗುತ್ತಿದೆಯೆಂದು ಉತ್ತರದಲ್ಲೇ ತಿಳಿಸಲಾಗಿದೆ.

ಶ್ರೀ ಎಲ್. ಎಚ್. ತಿಮ್ಮಾಬೋಯಿಯವರು.—ಪೊಬಲಗೆಷ್ಟೆಂದು ತಿಳಿಸಲಾಗುತ್ತದೆಯೇ !

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಈಗತಾನೆ ಬಜೆಟ್ಟು ಮಂಜೂರು ಆಗಿದೆ. ಅದರಲ್ಲಿ lumpsum ಆಗಿ ತಿಳಿಸಿರುತ್ತೆ.

ಶ್ರೀ ಎಲ್. ಎಚ್. ತಿಮ್ಮಾಬೋಯಿಯವರು.—ಈ ರಸ್ತೆ ಪಿ. ಡಬ್ಲ್ಯು. ಇಲಾಖೆಗೆ ಸೇರಿದೆಯೋ ಅಥವಾ ಸರ್ಕಾರದವರಿಗೆ ಸೇರಿದೆಯೋ ? ಅಥವಾ ಆ ಪ್ರಾಜೆಕ್ಟ್ ಇಲಾಖೆಗೆ ಸೇರಿದೆಯೋ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಪಿ. ಡಬ್ಲ್ಯು. ಇಲಾಖೆಯೂ ಸರ್ಕಾರಕ್ಕೆ ಸಂಬಂಧಪಟ್ಟ ಇಲಾಖೆಯೇ. ಆದರೆ ಆ ಪ್ರಾಜೆಕ್ಟ್ ಬಗ್ಗೆ ನಾವು ಈಗ ಒದಗಿಸಿರುವ ಮೊಬಲಗು ತೀರಾ ಕಮ್ಮಿ. 15 ಲಕ್ಷ ರೂಪಾಯಿಗಳನ್ನು ಒದಗಿಸಲಾಗಿದೆ. ಈ ರಸ್ತೆ ಈಗ ಪಿ. ಡಬ್ಲ್ಯು. ಡಿ. ಅವರಿಗೆ ಸೇರಿದೆ.

ಶ್ರೀ ಎಲ್. ಎಚ್. ತಿಮ್ಮಾಬೋಯಿಯವರು.—ಈಗ ತಾವು ಹಳ್ಳಿ—ಪಟ್ಟಣಗಳಿಗೆರ್ಲಾ ಒಂದೇಸಮನಾಗಿ ಕಾರ್ಪೆಕ್ಟ್ರೀಟ್ ರಸ್ತೆ ಮಾಡಿ ಬೇಕೆಂಬ ಉದ್ದೇಶ ಇಟ್ಟುಕೊಂಡಿದ್ದೀರಿ. ಅದರ ಪ್ರಕಾರ ಈ ಲಕ್ಕವಳ್ಳಿ ರಸ್ತೆಯನ್ನು ಕಾರ್ಪೆಕ್ಟ್ರೀಟ್ ರಸ್ತೆಯಾಗಿ ಮಾಡಿಸತಕ್ಕ ಸಂಭವ ಉಂಟೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಸಧ್ಯಕ್ಕೆ ಅದು ಅಸಂಭವ. ಹಣದ ಅಭಾವ ಜಾಸ್ತಿಯಾಗಿರುವುದೇ ಆ ಅಭಾವಕ್ಕೆ ಕಾರಣ.

ಶ್ರೀ ಎಲ್. ಎಚ್. ತಿಮ್ಮಾಬೋಯಿಯವರು.—ಈ ಲಕ್ಕವಳ್ಳಿ ರಸ್ತೆಯು ಪೂರಾ ಕೆಟ್ಟುಹೋಗಿ ತಿರುಗಾಡುವ ಜನರಿಗೆ ಧೂಳು ಹೆಚ್ಚಾಗಿ ತೊಂದರೆಯಾಗುತ್ತಿದೆಯೆಂಬುದು ತಮ್ಮ ಗಮನಕ್ಕೆ ಬಂದಿದೆಯೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನಿಜ. ಈ ರಸ್ತೆಯಲ್ಲಿ ಹೆಚ್ಚಿನ ವಾಹನ ಸಂಚಾರವಿದ್ದು ರಸ್ತೆ ಸ್ವಲ್ಪ ನಾದುರಸ್ತಾಗಿದೆ. ಸರಿಪಡಿಸಲು ಪ್ರಯತ್ನ ಮಾಡಲಾಗುತ್ತದೆ.

Amenities to Adikarnatakas and Adidravidas.

*ಪ್ರಶ್ನೆ 159.—ಶ್ರೀ ಡಿ. ಗೋವಿಂದದಾಸ್ ಅವರು (ಹಾಸನ ಡಿಸ್ಟ್ರಿಕ್ಟ್—ನಿಮ್ನ ತರಗತಿ).—

ಈ ಕೆಳಗೆ ಕೇಳಿರುವ ಸಂಗತಿಗಳನ್ನು ಸರ್ಕಾರದವರು ದಯೆಯಿಟ್ಟು ತಿಳಿಸಬೇಕೆಂದು ಪ್ರಾರ್ಥನೆ :—

(a) ಆದಿಕರ್ಣಾಟಕರಲ್ಲಿ "ಹೊರೆಯ" "ಅಥವಾ ಬಲಗ್ಯೆ" ಮತ್ತು "ಮಾದಿಗ" ಅಥವಾ "ಎಡಗ್ಯೆ" ಎಂಬ ಎರಡು ಸ್ಪಷ್ಟವಾದ ಮತ್ತು ಸ್ವತಂತ್ರವಾದ ಕೋಮುಗಳಿವೆಯೆಂಬುದು ಸರ್ಕಾರದವರಿಗೆ ಗೊತ್ತಿದೆಯೆ ;

(b) ಈ ಎರಡು ಕೋಮುಗಳನ್ನು ಪ್ರತಿನಿಧಿಸುವ "ಆದಿಕರ್ಣಾಟಕರ ಅಭಿವೃದ್ಧಿ ಸಂಘ" ಮತ್ತು "ಆದಿಜಾಂಬವ ಸಂಘ" ಎಂಬ ಎರಡು ರಿಜಿಸ್ಟರ್ಡ್ ಸಂಘುಗಳು ಸಂಸ್ಥಾನದಲ್ಲಿವೆಯೆ ?

(c) 1881, 1891, 1911 ಮತ್ತು 1921 ನೆಯ ಇಸವಿಗಳ ಜನಗಣತಿಯಲ್ಲಿ ಈ ಎರಡು ಕೋಮುಗಳ ಜನಸಂಖ್ಯೆಗಳೂ ಪ್ರತ್ಯೇಕ ಪ್ರತ್ಯೇಕವಾಗಿ ನಮೂದಾಗಿವೆಯೆ ;

(d) ಹಾಗಾದರೆ 1881 ನೆಯ ಇಸವಿಯಿಂದ 1921 ನೆಯ ಇಸವಿಯವರೆಗಿನ ಜನಗಣತಿಗಳಲ್ಲಿ ನಮೂದು ಮಾಡಲ್ಪಟ್ಟಿರುವ ಈ ಎರಡು ಕೋಮುಗಳ ಜನಸಂಖ್ಯೆಯೆಷ್ಟು ?

ಉತ್ತರ.—ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು (ಸ್ಥಳೀಯ ಪ್ರಜಾಧಿಕಾರ ಶಾಖೆಯ ನಟವರು).—

(a) ಹೌದು ; ಗೊತ್ತಿದೆ.

(b) ಈ ಎರಡು ಕೋಮುಗಳನ್ನು ಪ್ರತಿನಿಧಿಸುವ, ಈ ಕೆಳಗೆ ನಮೂದುಮಾಡಿರುವ ಮೂರು ಸಂಘುಗಳು 1904ನೆಯ ಇಸವಿಯು III ನೆಯ ನಂಬರಿನ ಆಕ್ಟಾದ ಮೈಸೂರು ಸಂಸ್ಥಾನದ ಸಂಘುಗಳ ರಿಜಿಸ್ಟ್ರೇಷನ್ ಆಕ್ಟಿನ ಮೇರೆಗೆ ರಿಜಿಸ್ಟರ್ ಮಾಡಲ್ಪಟ್ಟಿವೆ.

ಹೆಸರು	ರಿಜಿಸ್ಟ್ರೇಷನ್ ತಾರೀಖು
1 ಆದಿಕರ್ಣಾಟಕರ ಅಭಿವೃದ್ಧಿ ಸಂಘ, ಬೆಂಗಳೂರು ಸಿಟಿ.	1-4-1931
2 ಆದಿಜಾಂಬವ ಹರಿಜನ ವಿದ್ಯಾರ್ಥಿ ವೃದ್ಧಿ ಟ್ರಸ್ಟು, ಬೆಂಗಳೂರು ಸಿಟಿ.	19-5-1932
3 ಆದಿಜಾಂಬವಾಭಿವೃದ್ಧಿ ಸಂಘ ಬೆಂಗಳೂರು ಸಿಟಿ.	17-8-1936

"ಆದಿಜಾಂಬವ ಸಂಘ" ಎಂಬ ಹೆಸರಿನ ಯಾವ ಸಂಘವೂ ಮೈಸೂರು ಸಂಸ್ಥಾನದಲ್ಲಿ ರಿಜಿಸ್ಟರ್ ಮಾಡಲ್ಪಟ್ಟಿಲ್ಲ.

(c) ಹೌದು ; ನಮೂದಾಗಿವೆ.

(d) ಆಯಾ ವರ್ಷಗಳ ಅಚ್ಚುಹಾಕಿರುವ ಜನಗಣತಿ ವರದಿಗಳನ್ನು ಮಾನ್ಯ ಸದಸ್ಯರು ಪರಿಶೀಲಿಸಬೇಕೆಂದು ಬಿನ್ನೈಸಲಾಗಿದೆ.

ಶ್ರೀ ಡಿ. ಗೋವಿಂದದಾಸ್ ಅವರು.—ನನ್ನ ಪ್ರಶ್ನೆಯಲ್ಲಿ ಈ ಆದಿಕರ್ಣಾಟಕರಲ್ಲಿ ಬಲಗ್ಯೆ ಮತ್ತು ಎಡಗೆ ಅವರು ಎಂದು ಕೇಳಿದ್ದೆ. ಅದಕ್ಕೆ ಹೌದು ಎಂದ ಉತ್ತರ ಬಂದಿದೆ. ಹಾಗಾದರೆ ಈ ಬಲಗ್ಯೆ ಎಂಬ ಕೋಮಿನವರೂ ಇದ್ದಾರೆಯೇ ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—'ಬಲಗ್ಯೆ' ಎಂಬ ಕೋಮೂ ಇದೆ.

ಶ್ರೀ ಡಿ. ಗೋವಿಂದದಾಸ್ ಅವರು.—ಹಾಗಾದರೆ ಈ 'ಆದಿದ್ರಾವಿಡ' ಎಂಬ ತಕ್ಕವರು ಪ್ರತ್ಯೇಕ ಕೋಮಿನವರೆ ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಹೌದು.

ಶ್ರೀ ಡಿ. ಗೋವಿಂದದಾಸ್ ಅವರು.—ಇವರ ಪ್ರಜಾಸಂಖ್ಯೆ ಎಷ್ಟಿದೆಯೆಂಬುದನ್ನು ಹೇಳಲಾಗುತ್ತದೆಯೇ ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ನೋಟೀಸ್.

ಶ್ರೀ ಡಿ. ಗೋವಿಂದದಾಸ್ ಅವರು.—ಈ ಆದಿಕರ್ಣಾಟಕರಿಗಿರುವಂತೆ ಅವರಿಗೂ ಸೌಕರ್ಯಗಳುಂಟಲ್ಲವೇ ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಹೌದು.

ಶ್ರೀ ಡಿ. ಗೋವಿಂದದಾಸ್ ಅವರು.—ಅದಿಪ್ಪಾಂಬವರಿಗೋ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಈಗತಾನೆ ಉತ್ತರ ಹೇಳಿದ್ದೇನೆ.

ಶ್ರೀ ಡಿ. ಗೋವಿಂದದಾಸ್ ಅವರು.—ಈ ಕೋಮಿಗೆ ಕ್ರಿಶ್ಚಿಯನ್ನರೂ ಸೇರುತ್ತಾರೆಯೇ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಆ ಪ್ರಶ್ನೆ ಇದರಿಂದ ಉದ್ಭವಿಸುವುದಿಲ್ಲ.

ಶ್ರೀ ಎಂ. ಮಾದಯ್ಯನವರು.—ನಿಮ್ಮ ಪಂಗಡದಲ್ಲಿರುವ ಜನಸಂಖ್ಯೆ ಈಗಿನ ಸೆನ್ಸಸ್ ಪ್ರಕಾರ ಶೇಕಡವಾರು ಎಷ್ಟು ಹೆಚ್ಚಿದೆಯೆಂಬುದನ್ನು ಹೇಳುತ್ತೀರಾ?

ಅಧ್ಯಕ್ಷರು.—ಅದೆಲ್ಲವೂ ಪಬ್ಲಿಕ್ ಡಾಕ್ಯುಮೆಂಟ್. ತಾವೇ ನೋಡಬಹುದೆಂದು ಆಗಲೇ ತಿಳಿಸಿದ್ದಾರೆ. When the information is available in a printed report, there is no need to print it again with the answer. The Hon'ble Minister is right in inviting the Hon'ble Member's attention to that. That is the practice.

Sri M. MADIAH.—I take the Ruling of the Chair. 1921ನೆಯ ಇಸವಿ ಸೆನ್ಸಸ್‌ನಲ್ಲಿ ಎಡಗೈನವರು ಎರಡುಸಾವಿರ ಚಿಲ್ಲರೆ, ಬಲಗೈನವರು 6 ಸಾವಿರ ಚಿಲ್ಲರೆ ಇದ್ದರೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಬಂದಿಲ್ಲ.

ಶ್ರೀ ಎಂ. ಮಾದಯ್ಯನವರು.—ಸ್ಥಳೀಯ ಸಂಸ್ಥೆಗಳ ಸಚಿವರು 1941ನೆಯ ಇಸವಿ ಸೆನ್ಸಸ್‌ನಲ್ಲಿ ಈ ಎರಡು ಕೋಮುಗಳಿಗೂ ಪ್ರತ್ಯೇಕವಾಗಿ ಸೆನ್ಸಸ್ ನಡೆಯಬೇಕೆಂದು ಒತ್ತಾಯ ಮಾಡಿರುವುದು ನಿಜವೆ?

The Hon'ble Sri R. CHENNIGARAMIAH.—It does not arise out of this question.

Sri M. MADIAH.—May I know whether it is a fact that the Hon'ble Minister for Local Self-Government urged in the year 1940 the then Government to take separate figures for these two communities?

The Hon'ble Sri R. CHENNIGARAMIAH.—I do not know about it. It does not arise out of this question.

ಅಧ್ಯಕ್ಷರು.—1941ರಲ್ಲಿ ಅವರು ಸ್ಥಳೀಯ ಸಂಸ್ಥೆಗಳ ಸಚಿವರಾಗಿರಲಿಲ್ಲ.

ಶ್ರೀ ಎಂ. ಮಾದಯ್ಯನವರು.—1951ನೆಯ ಇಸವಿ ಸೆನ್ಸಸ್‌ನಲ್ಲಿ ಷೆಡ್ಯೂಲ್ಡ್ ಕ್ಯಾಸ್ಟ್ಸ್‌ಗೆ ಪ್ರತ್ಯೇಕವಾಗಿ ಸೆನ್ಸಸ್ ತೆಗೆದುಕೊಳ್ಳಲು ಏನು ಕಾರ್ಯಕ್ರಮ ಕೈಗೊಂಡಿತ್ತು?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಏನೂ ಇಲ್ಲ.

ಶ್ರೀ ಎಂ. ಮಾದಯ್ಯನವರು.—ಏಕೆ ಕಾರ್ಯಕ್ರಮ ತೆಗೆದುಕೊಳ್ಳಲಿಲ್ಲ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಅವಶ್ಯಕತೆ ಕಂಡುಬರಲಿಲ್ಲ.

ಶ್ರೀ ಎಂ. ಮಾದಯ್ಯನವರು.—ಜನಗಣತಿ ಮಾಡುವಾಗ ಪ್ರತಿಯೊಂದು ಹಿಂದುಳಿದ ಪಂಗಡ ಮತ್ತು ನಿಮ್ನವರ್ಗದ ಕೋಮುಗಳಿಗೂ ಪ್ರತ್ಯೇಕವಾಗಿ ಮಾಡಬೇಕೆಂದು ಗೊತ್ತಿರಲಿಲ್ಲವೆ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಷೆಡ್ಯೂಲ್ಡ್ ಕ್ಯಾಸ್ಟ್ಸ್‌ನ ಎಂದರೆ ನಿಮ್ನ ವರ್ಗಕ್ಕೇ ಬೇರೆ ಮಾಡಿದೆಯಲ್ಲಾ.

ಶ್ರೀ ಎಂ. ಮಾದಯ್ಯನವರು.—ಷೆಡ್ಯೂಲ್ಡ್ ಕ್ಯಾಸ್ಟ್ಸ್‌ನ ಮತ್ತು ಹಿಂದುಳಿದ ಪಂಗಡಗಳಲ್ಲಿ ಎಲ್ಲಾ ಕೋಮುಗಳಿಗೂ ಪ್ರತ್ಯೇಕವಾಗಿ ಜನಗಣತಿ ಮಾಡುವುದಕ್ಕೆ ತಿಳಿವಳಿಕೆ ಕೊಟ್ಟಿರಲಿಲ್ಲವೆ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಎಲ್ಲಾ ಪಂಗಡಗಳಿಗೂ ಪ್ರತ್ಯೇಕವಾಗಿ ಬೇಕಾಗಿರಲಿಲ್ಲ.

ಶ್ರೀ ಎಂ. ಮಾದಯ್ಯನವರು.—ಈ ವಿಚಾರದಲ್ಲಿ ಇಂಡಿಯಾ ಸರ್ಕಾರದವರು ತಿಳಿವಳಿಕೆ ಕೊಟ್ಟಿರಲಿಲ್ಲವೆ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಇಲ್ಲ.

ಶ್ರೀ ಎಂ. ಮಾದಯ್ಯನವರು.—ಇಂಡಿಯಾ ಸರ್ಕಾರದವರು ತಿಳಿವಳಿಕೆ ಕೊಡುವಾಗ ಹಿಂದುಳಿದ ಪಂಗಡ ಮತ್ತು ಷೆಡ್ಯೂಲ್ಡ್ ಕ್ಯಾಸ್ಟ್ಸ್‌ಗಳಲ್ಲಿ ಕೋಮುವಾರು ಸಂಖ್ಯೆಯನ್ನು ಬೇರೆಬೇರೆ ಜನಗಣತಿಯಲ್ಲಿ ಮಾಡಬೇಕೆಂದು ಹೇಳಿದ್ದರೆ, ನೀವಾದರೂ ಹೇಳಬಹುದಾಗಿತ್ತಲ್ಲವೆ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಷೆಡ್ಯೂಲ್ಡ್ ಕ್ಯಾಸ್ಟ್ಸ್‌ಗೆ ಬೇರೆಬೇರೆ ಜನಗಣತಿ ಮಾಡಿದೆ. ಅದರಲ್ಲಿ ಕೊರಚ, ಕೊರಮ, ಆದಿಕರ್ನಾಟಕ, ಆದಿದ್ರಾವಿಡ ಮುಂತಾದ ಪಂಗಡಗಳನ್ನು ವಿಂಗಡಿಸಿದೆ.

ಶ್ರೀ ಎಂ. ಮಾದಯ್ಯನವರು.—ಈ ಪಂಗಡಗಳನ್ನು ಅಭಿವೃದ್ಧಿಗೆ ತರುವುದು ಅತ್ಯಾವಶ್ಯಕನಾದ್ದರಿಂದ ಸೂಕ್ತ ಕಾರ್ಯಕ್ರಮ ತೆಗೆದುಕೊಳ್ಳಬೇಕಾಗುತ್ತಲ್ಲವೆ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಷೆಡ್ಯೂಲ್ಡ್ ಕ್ಯಾಸ್ಟ್ಸ್ ಅಭಿವೃದ್ಧಿಗೆ ಏನೇನು ಕಾರ್ಯಕ್ರಮ ಕೈಕೊಳ್ಳಬೇಕೋ ಅದನ್ನೆಲ್ಲಾ ಕೈಕೊಂಡಿದ್ದೇವೆ, ಮತ್ತು ಮುಂದೆ ಕೈಕೊಳ್ಳುವವರೂ ಆಗಿದ್ದೇವೆ.

ಶ್ರೀ ಎಂ. ಮಾದಯ್ಯನವರು.—ಆದಿದ್ರಾವಿಡರು ಆದಿಕರ್ನಾಟಕರು ಮಗ್ಗೆರೆ ಹಿಂದುಳಿದ ಪಂಗಡಗಳವರಿಗೆ ಎಷ್ಟು ನಿಗಾ ಕೊಡಬೇಕೆಂಬುದನ್ನು ಸರ್ಕಾರ ಮನಗಂಡಿಲ್ಲವೆ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಮೊದಲಿನಿಂದಲೂ ಅದನ್ನು ಮನಗಂಡು ಅವರನ್ನು ಅಭಿವೃದ್ಧಿಪಡಿಸುತ್ತಿದೆ. ಷೆಡ್ಯೂಲ್ಡ್ ಕ್ಯಾಸ್ಟ್ಸ್ ಎಲ್ಲಾ ಒಂದೇ ರೀತಿಯಲ್ಲಿ ಅಭಿವೃದ್ಧಿಗೆ ಬರಬೇಕು, ಎಲ್ಲರನ್ನೂ ಒಂದೇಸಮನಾಗಿ ಕಂಡು ಎಲ್ಲರಿಗೂ ಒಂದೇಸಮನಾದ ಅನುಕೂಲ ಕಲ್ಪಿಸಿಕೊಡಬೇಕು ಎಂಬುದೇ ಸರ್ಕಾರದ ಉದ್ದೇಶ. ಆದ್ದರಿಂದ ಅವರನ್ನು ವಿಂಗಡಿಸಲು ಸರ್ಕಾರ ತಿಳಿವಳಿಕೆ ಕೊಟ್ಟಿಲ್ಲ.

ಶ್ರೀ ಎಂ. ಮಾದಯ್ಯನವರು.—ಸಂಸ್ಥಾನದಲ್ಲಿರುವ ಎಲ್ಲಾ ಕೋಮುಗಳ ಜನಗಣತಿಯನ್ನೂ ಮಾಡಬೇಕೆಂಬುದು ಇಂಡಿಯಾ ಸರ್ಕಾರದ ಉದ್ದೇಶವಲ್ಲವೆ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಪೆಡ್ಯೂಲ್ಡ್ ಕ್ಯಾಸ್ಟ್ಸ್‌ನಲ್ಲಿರುವುದನ್ನೆಲ್ಲಾ ಮಾಡಿದೆ, ಯಾವುದೂ ಬಿಟ್ಟಿಲ್ಲ. ಹಿಂದುಳಿದ ಪಂಗಡಗಳಲ್ಲೂ ಒಳ ಪಂಗಡಗಳಿರುವುದನ್ನೆಲ್ಲಾ ಮಾಡಿದೆ.

ಶ್ರೀ ಜಿ. ವೀರಪ್ಪನವರು (ಚಿತ್ರದುರ್ಗ ಜಿಲ್ಲೆ).—ಎಲ್ಲಾ ಜಾತಿಗಳಲ್ಲೂ ಈ ಪಂಗಡಗಳು ಬೇಕಾದಷ್ಟಿರುತ್ತವೆಯೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

The Hon'ble Sri R. CHENNIGARAMIAH.—That does not arise out of this question.

ಶ್ರೀ ಜಿ. ವೀರಪ್ಪನವರು.—ಒಳಪಂಗಡಗಳೆಲ್ಲಕ್ಕೂ ಜನಗಣತಿ ಮಾಡಬೇಕೆಂದಿದೆಯೆ ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಇಲ್ಲ.

ಶ್ರೀ ಜಿ. ವೀರಪ್ಪನವರು.—ಒಳಪಂಗಡಗಳಿಗೆಲ್ಲಾ ಜನಗಣತಿ ಮಾಡುವುದರಿಂದ ಅನಾನುಕೂಲ ಹೆಚ್ಚು, ಅದರಿಂದ ಮಾಡಬಾರದು ಎಂಬುದು ಗಮನದಲ್ಲಿದೆಯೆ ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಒಳಪಂಗಡಗಳು ಹೆಚ್ಚಿದರೆ ಅಪಾಯ, ದೇಶ ಒಗ್ಗ ಟ್ಟಾಗಬೇಕು ಎಂಬ ಅಭಿಪ್ರಾಯವಿದೆ.

ಶ್ರೀ ಜಿ. ವೀರಪ್ಪನವರು.—ಎಡಗ್ಯೈ, ಬಲಗ್ಯೈ ಎಂದಿರುವುದರಲ್ಲಿ ಸಾಮಾಜಿಕ ದೃಷ್ಟಿಯಲ್ಲಿ ಮತ್ತು ಆರ್ಥಿಕ ದೃಷ್ಟಿಯಲ್ಲಿ ವ್ಯತ್ಯಾಸವಿದೆಯೆ ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಇಬ್ಬರೂ ಒಂದೇ.

ಶ್ರೀ ಟಿ. ಹನುಮಯ್ಯನವರು (ಚಿತ್ರದುರ್ಗ ಜಿಲ್ಲೆ).—ಆದಿಕರ್ನಾಟಕರು, ಆದಿದ್ರಾವಿಡರು ಮುಂತಾದವರು ಕ್ರಿಶ್ಚಿಯನ್ನರಾಗಿ ಆ ಪಂಗಡಕ್ಕೆ ಸೇರಿರುವುದರಿಂದ ಅವರನ್ನು ಹೇಗೆ ವಿಂಗಡಿಸಿದೆ ?

The Hon'ble Sri R. CHENNIGARAMIAH.—That does not arise out of this question.

ಶ್ರೀ ಟಿ. ಹನುಮಯ್ಯನವರು.—ಹಾಗೆ ಜಾತಿಯನ್ನು ಬದಲಾಯಿಸಿಕೊಂಡಿರುವವರನ್ನು ನಿಮ್ಮ ವರ್ಗದ ಜನ ಸಂಖ್ಯೆಯಲ್ಲೇ ಅಡಕಮಾಡಿದೆಯೆ ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಅದು ಸೇರಿಲ್ಲ. ಕ್ರಿಶ್ಚಿಯನ್ ಜನಾಂಗವೇ ಬೇರೆ. ಅದಕ್ಕೆ ಬೇರೆ ಜನಗಣತಿ ಮಾಡಿದೆ.

ಶ್ರೀ ಎಂ. ಗೋವಿಂದರೆಡ್ಡಿಯವರು (ಚಿತ್ರದುರ್ಗ ಜಿಲ್ಲೆ).—ಎಡಗ್ಯೈ ಬಲಗ್ಯೈನವರಿಗೆ ಜಗಳವಾಗುತ್ತಿದೆಯಲ್ಲವೆ ?

ಮಾನ್ಯ ಶ್ರೀ ಆರ್. ಚೆನ್ನಿಗರಾಮಯ್ಯನವರು.—ಅದನ್ನು ನಾವು ನೋಡಿಲ್ಲ.

Mr. SPEAKER.—VIII Part. Question No. 116. Sri D. H. Chandrasekharaiya. The Hon'ble Member is not present. The question will be treated as unstarred.

Next Question.—Question No. 197 Sri T. Madiah Gowda.

Increasing the Staff of the Efficiency Audit Department.

*ಪ್ರಶ್ನೆ 197.—ಶ್ರೀ ಟಿ. ಮಾದಯ್ಯಗೌಡರು (ಬೆಂಗಳೂರು ಜಿಲ್ಲೆ).—

ಈ ಕೆಳಗೆ ಕೇಳಿರುವ ಸಂಗತಿಗಳನ್ನು ಸರ್ಕಾರದವರು ದಯೆಯಿಟ್ಟು ತಿಳಿಸಬೇಕೆಂದು ಪ್ರಾರ್ಥನೆ:—

(a) ಸರ್ಕಾರದ ಪ್ರತಿಯೊಂದು ಇಲಾಖೆಯಲ್ಲಿಯೂ ಎಷ್ಟೆಷ್ಟು ಆಫೀಸುಗಳಲ್ಲಿ 'ಎಫಿಷಿಯನ್ಸಿ ಆಡಿಟ್' ತನಿಖೆಯನ್ನು ತಡೆಯಿಸಲಾಗಿದೆ; ಅದರ ಫಲತಾಂಶಗಳೇನು ;

(b) 'ಎಫಿಷಿಯನ್ಸಿ ಆಡಿಟ್' ತನಿಖೆಯನ್ನು ನಡೆಯಿಸುವುದಕ್ಕಾಗಿ ಒದಗಿಸಲ್ಪಟ್ಟಿರುವ ಸಿಬ್ಬಂದಿಯೆಷ್ಟು ;

(c) ಒಂದು ಆಫೀಸಿನ ಲೆಕ್ಕ ತನಿಖೆಯನ್ನು ನಡೆಯಿಸಲು ಅವರಿಗೆ ಸರಾಸರಿ ಎಷ್ಟು ಕಾಲಬೇಕಾಗುತ್ತದೆ ?

ಉತ್ತರ.—ಶ್ರೀ ಎಚ್. ಸಿ. ದಾಸಪ್ಪನವರು (ಆರ್ಥಿಕ ಮತ್ತು ಕೈಗಾರಿಕಾ ಸಚಿವರು) [on behalf of ಶ್ರೀ ಕೆ. ಚೆಂಗಲರಾಯರೆಡ್ಡಿಯವರು (ಪ್ರಧಾನ ಸಚಿವರು)].—

(a) 366 ಆಫೀಸುಗಳಲ್ಲಿ. ಇಲಾಖಾವಾರು ವಿವರಗಳನ್ನು ಇದರಡಿ ಮುದ್ರಿತವಾಗಿರುವ ಪರಿಶಿಷ್ಟದಲ್ಲಿ ಕೊಡಲಾಗಿದೆ. ಸರ್ಕಾರಕ್ಕೆ ಬರತಕ್ಕ ಆದಾಯವು ನಷ್ಟವಾಗಿರುವುದಾಗಿ ಕಂಡುಬಂದ ಸಂದರ್ಭಗಳಲ್ಲಿ ಆ ಮೊಬಲಗನ್ನು ವಸೂಲುಮಾಡಲು ಅಥವಾ ನಷ್ಟಕ್ಕೆ ಜವಾಬ್ದಾರರು ಯಾರೆಂಬುದನ್ನು ಗೊತ್ತುಮಾಡಲು ಸಂಬಂಧಪಟ್ಟ ಇಲಾಖಾ ಮೊಖ್ತೇಸರುಗಳ ಮೂಲಕ ಕಾರ್ಯಕ್ರಮವನ್ನು ಕೈಗೊಳ್ಳುತ್ತಿರಲಾಗಿದೆ.

ತನಿಖೆ ನಡೆಸಿದ ಕಾಲದಲ್ಲಿ ಕಂಡುಬಂದ ಅಕ್ರಮಗಳನ್ನು ಇಲಾಖಾ ಮೊಖ್ತೇಸರರುಗಳ ಗಮನಕ್ಕೆ ತಂದು ಆ ಅಕ್ರಮಗಳನ್ನು ನಿವಾರಿಸಲು ಅವರ ಕೈಕೆಳಗಿನ ಆಫೀಸರುಗಳಿಗೆ ಯುಕ್ತವಾದ ಅನುಜ್ಞೆಗಳನ್ನು ಸಾದರು ಮಾಡುವಂತೆ ಅವರಿಗೆ ತಿಳಿಸಲಾಗಿದೆ. ಅಂಥ ಅಕ್ರಮಗಳು ನಡೆದುದಕ್ಕೆ ಯಾವ ಆಫೀಸರುಗಳು ಮತ್ತು ನೌಕರರು ಜವಾಬ್ದಾರರೆಂದು ಕಂಡುಬಂದಿತೋ ಅಂಥ ಆಫೀಸರುಗಳ ಮತ್ತು ನೌಕರರಮೇಲೆ ಯುಕ್ತವಾದ ಶಿಸ್ತಿನ ಕಾರ್ಯಕ್ರಮವನ್ನು ಕೈಕೊಳ್ಳಲಾಗಿದೆ.

(b) ಇಬ್ಬರು ಗೆಜೆಟೆಡ್ ಆಫೀಸರುಗಳು. ಅವರ ಪೈಕಿ ಒಬ್ಬರು ಅಮಲ್ದಾರರ ದರ್ಜೆಯವರು, ಮತ್ತೊಬ್ಬರು ಅಸಿಸ್ಟೆಂಟ್ ಕಮಿಷನರ ದರ್ಜೆಯವರು; ಮತ್ತು ಐದು ಮಂದಿ ಲೆಕ್ಕಪರಿಶೀಲಕರನ್ನೊಳಗೊಂಡ (ಆಡಿಟರುಗಳನ್ನೊಳಗೊಂಡ) ಒಂದು ಲೆಕ್ಕಪರಿಶೀಲತರ ಸಿಬ್ಬಂದಿ (ಆಡಿಟ್ ಸಿಬ್ಬಂದಿ).

(c) ಇದು, ಯಾವ ಆಫೀಸು ಕೆಲಸದ ಸಂಬಂಧದಲ್ಲಿ ಲೆಕ್ಕ ತನಿಖೆಯನ್ನು ನಡೆಯಿಸಲಾಗುತ್ತಿದೆಯೋ ಆ ಆಫೀಸು ಕೆಲಸದ ಪರಿಮಾಣವನ್ನು ಮತ್ತು ಅದರ ಸ್ವಭಾವವನ್ನೂ ಅವಲಂಬಿಸಿರುತ್ತದೆ.

1946-47ನೆಯ ಸಾಲಿನಿಂದ 1950-51ನೆಯ ಸಾಲಿನವರೆಗೆ ಎಫಿಷಿಯರ್ಸಿ ಆಡಿಟ್ ಶಾಖೆಯವರು ತನಿಖೆ ನಡೆಯಿಸಿರತಕ್ಕ ಸಂಸ್ಥೆಗಳ ಮತ್ತು ಆಫೀಸುಗಳ ಪಟ್ಟಿ.

			ಆಫೀಸುಗಳು		ಡಿಪೋಗಳು, ಮೊದಲಾದುವು
1	ವ್ಯವಸಾಯ	...	6	...	28
2	ಚೀಫ್‌ರೇಷನಿಂಗ್ ಅಥಾರಿಟಿ	...	4	...	...
3	ಸಿವಿಲ್ ಸರಬರಾಯಿ	...	1	...	...
4	ಪರಸ್ಪರ ಸಹಾಯ ಸಂಘಗಳು	...	5	...	...
5	ವಿದ್ಯಾಭ್ಯಾಸ	...	3	...	...
6	ವಿದ್ಯುಚ್ಛಕ್ತಿ	...	4	...	...
7	ಎಕ್ಸೈಜು	...	4	...	...
8	ಆಹಾರನರಬರಾಯಿ	...	25	...	91
9	ಫಾರೆಸ್ಟ್	...	25	...	4
10	ಜನರಲ್ ಮತ್ತು ರೆವೆನ್ಯೂ ಸೆಕ್ರೆಟೆರಿಯೆಟ್	...	2	...	...
11	ಫಲಪುಷ್ಪಗಳ ('ಹಾರ್ಟಿಕಲ್ಚರ್') ಆಫೀಸು	...	2	...	...
12	ಕೈಗಾರಿಕೆಗಳು ಮತ್ತು ವಾಣಿಜ್ಯ	...	3	...	...
13	ಜೈಲುಗಳು	...	1	...	...
14	ಲ್ಯಾಂಡ್ ರಿಕಾರ್ಡ್ಸ್	...	1	...	...
15	ವೈದ್ಯ ಸಹಾಯ	...	4	...	...
16	ಜಿಯಾಲಜಿ	...	1	...	...
17	ಮುನಿಸಿಪಾಲಿಟಿಗಳು	...	1	...	...
18	ಪೋಲೀಸು	...	3	...	...
19	ಪಬ್ಲಿಕ್ ವರ್ಕ್ಸ್	...	3	...	...
20	ರೈಲ್ವೆಗಳು	...	7	...	7
21	ರೆವೆನ್ಯೂ ಮತ್ತು ಮುಜರಾಯಿ	...	123	...	...
22	ಸ್ಟೇಷನರಿ ಮತ್ತು ಪ್ರಿಂಟಿಂಗ್	...	1	...	...
23	ಸ್ಯಾನಿಟರಿ ಇಂಜಿನಿಯರಿಂಗ್	...	1	...	...
24	ಸೆರಿಕಲ್ಚರ್ (ರೇಷ್ಮೆ ವ್ಯವಸಾಯದ ಇಲಾಖೆ)	...	2	...	...
25	ಸ್ಟೋರ್ಸ್ ಪರ್ಚೇಸ್ ಸಮಿತಿ	...	1	...	...
26	ಪಶುವೈದ್ಯ	...	3	...	....
			236	+	130=366

Sri T. MADIAH GOWDA.—(a) ಪ್ರಶ್ನೆಗೆ ಉತ್ತರವಾಗಿ 366 ಆಫೀಸುಗಳಲ್ಲಿ ಎಫಿಷಿಯೆನ್ಸಿ ಆಡಿಟ್ ತನಿಖೆಯನ್ನು ನಡೆಯಿಸಿದೆ ಎಂದು ಹೇಳಿದೆ. How many unit offices, may I know?

The Hon'ble Sri H. C. DASAPPA.—Notice.

ಶ್ರೀ ಟಿ. ಮಾದಯ್ಯಗೌಡರು.—ಆಡಿಟ್ ಮಾಡಿರತಕ್ಕ ದ್ದರಲ್ಲಿ ಕೆಲವು ಇಲಾಖೆಗಳ ಆಫೀಸುಗಳನ್ನೇ ಹೆಚ್ಚಾಗಿ ತೆಗೆದುಕೊಂಡಿದೆ, ಬಾಕಿ ಇಲಾಖೆಗಳನ್ನು ಗಮನಕ್ಕೆ ತೆಗೆದುಕೊಂಡಿಲ್ಲ. ಇದಕ್ಕೆ ಕಾರಣವೇನು? ಆ ಬಗ್ಗೆ ಕಾರ್ಯಕ್ರಮವೇನಾದರೂ ಇದೆಯೆ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಅದಕ್ಕೆ ವಿಶೇಷ ಕಾರಣವೇನೂ ಇಲ್ಲ. ಸಾಧಾರಣವಾಗಿ ಎಲ್ಲಿ ಹೆಚ್ಚು ಹೆಚ್ಚಾಗಿ ಮಾಡುವುದು ಅವಶ್ಯಕವೋ ಅಲ್ಲಿ ಹೆಚ್ಚಾಗಿ ತನಿಖೆಮಾಡಿದ್ದಾರೆ. ಆಹಾರದ ಇಲಾಖೆಯಂಥಾದ್ದಕ್ಕೆ ಹೆಚ್ಚು ಗಮನ ಕೊಟ್ಟಿದೆ.

ಶ್ರೀ ಟಿ. ಮಾದಯ್ಯಗೌಡರು.—ಇನ್ನು ಮೇಲಾದರೂ ಆಹಾರ ಸರಬರಾಯಿಗೆ ಸಂಬಂಧಪಟ್ಟ ಎಲ್ಲಾ ಯೂನಿಟ್ಟುಗಳಲ್ಲೂ ಜಾಗ್ರತೆ ಎಫಿಷಿಯೆನ್ಸಿ ಆಡಿಟ್ ಮಾಡಬೇಕೆಂಬುದು ಸರ್ಕಾರದ ಗಮನದಲ್ಲಿದೆಯೆ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಆ ಇಲಾಖೆ ಎಲ್ಲಾ ಆಫೀಸುಗಳನ್ನೂ ನೋಡುವುದಿಲ್ಲ ಎಂಬುದನ್ನು ಆಗಲೇ ಹೇಳಿದೆ.

ಶ್ರೀ ಟಿ. ಮಾದಯ್ಯಗೌಡರು.—ಎಫಿಷಿಯೆನ್ಸಿ ಆಡಿಟ್ ಆಹಾರದ ಇಲಾಖೆಯ ಎಲ್ಲಾ ಆಫೀಸುಗಳಲ್ಲಯೂ ಆದಷ್ಟು ಜಾಗ್ರತೆ ಮಾಡಬೇಕೆಂಬುದಾಗಿ ಒಂದು ಯೋಚನೆಯಿದೆಯೆ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಅವರು ಒಂದು ಕಾರ್ಯಕ್ರಮ ಹಾಕಿಕೊಳ್ಳುತ್ತಾರೆ. ಎಲ್ಲಾ ಆಫೀಸುಗಳನ್ನೂ ಆಡಿಟ್ ಮಾಡಬೇಕೆಂದಿಲ್ಲ. ಎಷ್ಟು ಸಾಧ್ಯವೋ ಅಷ್ಟು ಮಾಡುತ್ತಾರೆ. ಎಲ್ಲಾ ಆಫೀಸುಗಳಲ್ಲೂ ಆಡಿಟ್‌ಮಾಡುತ್ತಾರೆಂದು ಹೇಳುವುದಕ್ಕಾಗುವುದಿಲ್ಲ.

ಶ್ರೀ ಟಿ. ಮಾದಯ್ಯಗೌಡರು.—ತಮ್ಮಲ್ಲಿರುವ ಸಿಬ್ಬಂದಿಯಲ್ಲೇ ಸರ್ಕಾರದ ಎಲ್ಲಾ ಯೂನಿಟ್ ಆಫೀಸುಗಳಲ್ಲೂ ಎಫಿಷಿಯೆನ್ಸಿ ಆಡಿಟ್ ಒಂದು ಸಲ ಮಾಡಬೇಕಾದರೆ ಸುಮಾರು ಎಷ್ಟು ವರ್ಷವಾಗಬಹುದು?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಅದು ಸಾಧ್ಯವಿಲ್ಲ.

ಶ್ರೀ ಟಿ. ಮಾದಯ್ಯಗೌಡರು.—ಈಗಿರುವ ಸಿಬ್ಬಂದಿಗೆ ಅವರಿಗಿರುವ ಕೆಲಸವೇ ಸಾಕಾಗಿದೆಯೆಂಬುದು ಸರ್ಕಾರದ ಅಭಿಪ್ರಾಯವೆ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಸಿಬ್ಬಂದಿ ಹೆಚ್ಚಾಗಿ ತೆಗೆದುಕೊಂಡರೆ ಒಳ್ಳೆಯದೆಂದು ಸರ್ಕಾರದ ಗಮನಕ್ಕೆ ಬಂದಿದೆ.

ಶ್ರೀ ಟಿ. ಮಾದಯ್ಯಗೌಡರು.—ಹಾಗಿದ್ದಮೇಲೆ ಅದಕ್ಕೆ ತಕ್ಕ ಏರ್ಪಾಡು ಮಾಡುತ್ತೀರಾ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಈಗ ರಿಚ್ರೆಂಚ್‌ಮೆಂಟ್ ಪ್ರಶ್ನೆಯಿದೆ. ಅನೇಕ ಕೆಲಸಗಳಿಗೆ ಹಣಬೇಕಾಗಿದೆ. ಆದ್ದರಿಂದ ಹೆಚ್ಚಾಗಿ ಓದಗಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಅವಶ್ಯಕವಾಗಿ ಬೇಕಾದ ಸಿಬ್ಬಂದಿಯನ್ನು ಹೆಚ್ಚಿಸುವುದಕ್ಕೆ ಸರ್ಕಾರದವರು ಪ್ರಯತ್ನಮಾಡುತ್ತಾರೆ.

ಶ್ರೀ ಟಿ. ಮಾದಯ್ಯಗೌಡರು.—ಎಕಾನಮಿ ದೃಷ್ಟಿಯಿಂದ ರಿಚ್ರೆಂಚ್‌ಮೆಂಟ್‌ಮಾಡಿದರೂ ಪ್ರತಿಯೊಂದು ಆಫೀಸಿನಲ್ಲೂ ದಕ್ಷತೆಯಿಂದ ಕೆಲಸ ನಡೆಯುತ್ತಿದೆಯೇ ಎಂಬುದನ್ನು ನೋಡಿಕೊಳ್ಳತಕ್ಕದ್ದು ಅತಿ ಜರೂರಾದ ಕರ್ತವ್ಯವಲ್ಲವೇ!

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಅದ ಕ್ಕೋಸ್ಕರವೇ ಆ ಇಲಾಖೆಯನ್ನು ತೆಗೆದಿರುವುದು.

ಶ್ರೀ ಟಿ. ಮಾದಯ್ಯಗೌಡರು.—ಅದನ್ನು ಅದಷ್ಟು ಜಾಗ್ರತೆ ಮಾಡಿ, ಒಂದು ಸೂಚನೆ ಕೊಡುವುದಕ್ಕೆ ಸರಿಯಾದ ಸಿಬ್ಬಂದಿ ಇರಬೇಕಲ್ಲವೇ!

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಉತ್ತರ ಕೊಟ್ಟಿದೆ. ಇನ್ನೂ ಸ್ವಲ್ಪ ಬೇಕಾಗುತ್ತದೆ ಎಂದರೆ ಸರ್ಕಾರದವರು ಯೋಚನೆಮಾಡುತ್ತಾರೆ ಎಂದು ಹೇಳಿದ ಮೇಲೆ ಇನ್ನೇನು!

ಶ್ರೀ ಟಿ. ಮಾದಯ್ಯಗೌಡರು.—ರೆವೆನ್ಯೂ ಇಕ್ಸೈ ಕ್ಟರು ದಕ್ಷತೆಯಿಂದ ಕೆಲಸಮಾಡುತ್ತಾರೆಯೋ ಎಂಬು ದನ್ನು ಇತ್ತೀಚೆಗೆ ಪರೀಕ್ಷೆ ಮಾಡಿದ್ದಾರೆಯೇ!

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಪ್ರತ್ಯೇಕವಾಗಿ ಅವರ ಮೇಲೆ ಒಂದು ದೃಷ್ಟಿಯನ್ನಿಟ್ಟಿಲ್ಲ. ಮಾನ್ಯ ಸದಸ್ಯರು ಸೂಚಿಸಿದ ಮೇಲೆ ಬೇಕಾದರೆ ಇಡೋಣ.

ಶ್ರೀ ಟಿ. ಮಾದಯ್ಯಗೌಡರು.—ಅವರು ಮಾಡಿದ ಲೋಪದೋಷಗಳನ್ನು ಪರಿಶೀಲಿಸಿ ತಾವೇ ಖುದ್ದಾಗಿ, ನೇರವಾಗಿ ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ ಅವ ಕಾಶವಿಲ್ಲದೆ, ಆಯಾಯಾ ಇಲಾಖಾ ಮುಖ್ಯಾಧಿಕಾರಿ ಗಳು ಮಾತ್ರ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದ ಲ್ಲವೇ ಈಗಿರುವುದು?

The Hon'ble Sri H. C. DASAPPA.—I did not follow the Hon'ble Member.

ಶ್ರೀ ಟಿ. ಮಾದಯ್ಯಗೌಡರು.—ಎಫಿಷಿರ್ಯಸಿ ಆಡಿಟ್ ಮಾಡುವವರು ಕಾಣತಕ್ಕ ಲೋಪದೋಷಗಳನ್ನು, ಸರಿ ಪಡಿಸಲು ಅವರೇ ಖುದ್ದಾಗಿ ಕಾರ್ಯಕ್ರಮತೆಗೆದುಕೊ ಳ್ಳುವುದಕ್ಕೆ ಅವಕಾಶವಿಲ್ಲ. ಅದನ್ನು ಸಂಬಂಧಪಟ್ಟ ಆಯಾಯಾ ಇಲಾಖೆಯ ಮೊಖ್ತೇಸರರಿಗೆ ಸೂಚಿಸಬ ಹುದು. ಈ ತರಹ ಏರ್ಪಾಡು ಈಗ ಇದೆ ಎಂದು ಹೇಳಿ ದರೆ ಒಪ್ಪುತ್ತೀರಾ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಅದನ್ನು ಒಪ್ಪುವುದಿಲ್ಲ. ಆಯಾಯಾ ಇಲಾಖೆಯ ದಕ್ಷತೆಯ ಹೆಚ್ಚಿ ಸಲು ಯಾವಯಾವ ಸಲಹೆಗಳನ್ನು ಕೊಡಬಹುದೋ ಆ ಸಲಹೆಗಳನ್ನು ಕೊಡಲು ಅವರಿಗೆ ಪೂರ್ಣ ಅಧಿಕಾರ ಇದೆ.

ಶ್ರೀ ಟಿ. ಮಾದಯ್ಯಗೌಡರು.—ಸಲಹೆ ಯಾರಿಗೆ ಕೊಡುತ್ತಾರೆ. ಆಯಾಯಾ ಇಲಾಖೆಯ ಮೊಖ್ತೇಸರ ರಿಗೆ ತಾನೆ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಅವರ ಸಲಹೆಗಳನ್ನು ಸರ್ಕಾರದವರ ಮೂಲಕ ತಿಳಿಸುತ್ತಾರೆ.

ಶ್ರೀ ಟಿ. ಮಾದಯ್ಯಗೌಡರು.—ಆ ಸಲಹೆಗಳನ್ನು ಜಾರಿಗೆ ತಂದಿದೆಯೋ ಅಥವಾ ಇಲ್ಲವೋ ಎಂಬುದನ್ನು ಯಾರು ನೋಡಿಕೊಳ್ಳುತ್ತಾರೆ; ಎಫಿಷಿಸಿ ಆಡಿಟ್‌ನವರೇ, ಆಯಾಯಾ ಇಲಾಖೆಯವರೇ ಅಥವಾ ಸರ್ಕಾರದವರೇ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಪ್ರಥಮ ದಲ್ಲಿ ಇಲಾಖೆಯವರು, ಆ ಮೇಲೆ ಕೊಟ್ಟಿರುವ ಸಲಹೆ ಗಳನ್ನು ಅನುಸರಿಸಿ ನಡೆಸುತ್ತಾರೆಯೇ, ಇಲ್ಲವೇ ಎಂಬು ದನ್ನು ಎಫಿಷಿಯರ್ಸಿ ಆಡಿಟ್‌ನವರು ಪುನಃ ನೋಡ ಬಹುದು.

ಶ್ರೀ ಟಿ. ಮಾದಯ್ಯಗೌಡರು.—ಹಾಗೆ ಅವರು ಕೊಟ್ಟ ಸಲಹೆಗಳನ್ನು ಅನುಸರಿಸಿ ಕೆಲಸಮಾಡುತ್ತಿ ದ್ದಾರೆಯೇ ಇಲ್ಲವೇ ಎಂಬುದನ್ನು ಎಫಿಷಿಯರ್ಸಿ ಆಡಿಟ್ ನವರು ನೋಡ ತ್ತಿದ್ದಾರೆಯೇ?

The Hon'ble Sri H. C. DASAPPA.—We must trust the Departments to do tbeir job well. ಹಾಗೆ ಮಾಡುತ್ತಾ ಇಲ್ಲ ಎಂಬು ದಾಗಿ ನಮ್ಮ ಗಮನಕ್ಕೆ ಬಂದಿಲ್ಲ.

ಶ್ರೀ ಎಂ. ಗೋವಿಂದರೆಡ್ಡಿಯವರು (ಚಿತ್ರದುರ್ಗ ಜಿಲ್ಲೆ).—ಅಗ್ರಿಕಲ್ಚರ್‌ನಲ್ಲಿ 28 ಡಿಪೋ, 6 ಆಫೀಸುಗ ಳಲ್ಲಿ ಎಫಿಷಿಯರ್ಸಿ ಆಡಿಟ್ ಆಗಿದೆ ಎಂದು ತಿಳಿಸಿದ್ದೀರಿ. ಆಗದೇ ಇರುವ ಆಫೀಸುಗಳು ಎಷ್ಟಿವೆ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ನೋಟೀಸ್.

ಶ್ರೀ ಎಂ. ಗೋವಿಂದರೆಡ್ಡಿಯವರು.—Irregularities ಇದ್ದಂಥ ಆಫೀಸುಗಳಲ್ಲಿ ಶಿಸ್ತಿನ ಕ್ರಮ ತೆಗೆದುಕೊಳ್ಳಲಾಗಿದೆ ಎಂದು ಹೇಳಿದ್ದೀರಿ. ಯಾವ ರೀತಿ ಶಿಸ್ತಿನ ಕ್ರಮ ತೆಗೆದುಕೊಂಡಿದ್ದೀರಿ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ನಾನಾ ರೀತಿ ಇದೆ. Warning, de-promotion, ಹಣ ದುರ್ವಿನಿಯೋಗಪಡಿಸಿದ್ದರೆ ಅದನ್ನು ತೆಗೆದುಕೊಳ್ಳುವುದು ಮತ್ತು ಮುಂದೆ ಇನ್ನೂ ತನಿಖೆಮಾಡಿ ಕೆಲಸದಿಂದ ತೆಗೆ ಯುವುದು, prosecutions, ಹೀಗೆ ನಾನಾ ರೀತಿ ಇದೆ.

ಶ್ರೀ ಎಂ. ಗೋವಿಂದರೆಡ್ಡಿಯವರು.—ಆ ರೀತಿ ಯಾರಮೇಲಾದರೂ ಶಿಸ್ತಿನ ಕ್ರಮ ತೆಗೆದುಕೊಳ್ಳ ಲಾಗಿದೆಯೇ!

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಕ್ರಮ ತೆಗೆದುಕೊಂಡಿದೆ.

ಶ್ರೀ ಎಂ ಗೋವಿಂದರೆಡ್ಡಿಯವರು.—ಎಷ್ಟು ಜನ ಗಳ ಮೇಲೆ ಆ ರೀತಿ ಕಾರ್ಯಕ್ರಮ ತೆಗೆದುಕೊಂಡಿ ದ್ದೀರಿ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ನೋಟೀಸ್.

ಶ್ರೀ ಎಂ. ಗೋವಿಂದರೆಡ್ಡಿಯವರು.—ಯಾರನ್ನಾದರೂ ಕೆಲಸದಿಂದ ವಜಾಮಾಡಲಾಗಿದೆಯೆ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಮಾಡ ಲಾಗಿದೆ.

ಶ್ರೀ ಎಂ. ಗೋವಿಂದರೆಡ್ಡಿಯವರು.—ಎಷ್ಟು ಜನ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ನೋಟೀಸ್.

ಶ್ರೀ ಎಚ್. ಸಿದ್ದವೀರಪ್ಪನವರು (ಚಿತ್ರದುರ್ಗ ಜಿಲ್ಲೆ).—ಎಫಿಷಿರ್ಯಸಿ ಆಡಿಟ್‌ಆಗಬೇಕಾದರೆ, ಅವರೇ ಯಾವ ಇಲಾಖೆ ಬೇಕಾದರೂ ಆರಿಸಿಕೊಂಡು ಮಾಡು ತ್ತಾರೆಯೇ ಅಥವಾ ಡೈರೆಕ್ಷನ್ ಬರುತ್ತದೆಯೇ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಅವರೇ ಮಾಡಬಹುದು.

ಶ್ರೀ ಎಚ್. ಸಿದ್ದವೀರಪ್ಪನವರು.—ಫೊಸೀಜರ್ ಯಾವುದು?

ಮಾನ್ಯ ಶ್ರೀ ಎಚ್. ಸಿ. ದಾನಪ್ಪನವರು.—ಅವರೇ ಮಾಡಬಹುದು.

ಶ್ರೀ ಎಚ್. ಸಿದ್ದವೀರಪ್ಪನವರು.—ಯಾವಾಗಲಾದರೂ ದೂರು ಬಂದರೆ ಎಫಿಷಿಯರ್ಟಿಸಿ ಆಡಿಟ್‌ಮಾಡುತ್ತಾರೆಯೇ?

ಮಾನ್ಯ ಶ್ರೀ ಎಚ್. ಸಿ. ದಾನಪ್ಪನವರು.—ದೂರು ಬಂದಮೇಲೂ ವಿಚಾರಮಾಡಬಹುದು.

ಶ್ರೀ ಎಚ್. ಸಿದ್ದವೀರಪ್ಪನವರು.—ಈಗ ಯಾವುದನ್ನು ಅನುಸರಿಸುತ್ತಿದ್ದಾರೆ?

ಮಾನ್ಯ ಶ್ರೀ ಎಚ್. ಸಿ. ದಾನಪ್ಪನವರು.—ಎರಡೂ ಇದೆ.

ಶ್ರೀ ಎಲ್. ಎಚ್. ತಿಮ್ಮಾಬೋಯಿಯವರು (ಚಿಕ್ಕಮಗಳೂರು ಜಿಲ್ಲೆ—ತಿಮ್ಮಾಪುರ ಪಂಗಡ).—ಪಬ್ಲಿಕ್ ವರ್ಕ್ಸ್ ಇಲಾಖೆಯಲ್ಲಿ ಎಫಿಷಿಯರ್ಟಿಸಿ ಆಡಿಟ್‌ಮಾಡಿರುವ ಆಫೀಸುಗಳ ಸಂಖ್ಯೆ 3 ಎಂದು ತಿಳಿಸಿದ್ದೀರಿ. ಈ ಮೂರು ಆಫೀಸುಗಳು ಮಾಡಿದರೆ ಸಾಕೇ?

ಮಾನ್ಯ ಶ್ರೀ ಎಚ್. ಸಿ. ದಾನಪ್ಪನವರು.—ವಿಷಯ ತಿಳಿದುಕೊಳ್ಳುವುದು ಏನಾದರೂ ಇದ್ದರೆ ಕೇಳಬಹುದೇ ಹೊರತು ಅಭಿಪ್ರಾಯ ಕೇಳುವುದಕ್ಕೆ ಇದು ಸಮಯವಲ್ಲ.

ಶ್ರೀ ಎಲ್. ಎಚ್. ತಿಮ್ಮಾಬೋಯಿಯವರು.—ದೇಶದ ಅಭ್ಯುದಯದ ದೃಷ್ಟಿಯಿಂದ ಪಬ್ಲಿಕ್ ವರ್ಕ್ಸ್ ಇಲಾಖೆಯಲ್ಲಿ ವಿಶೇಷವಾಗಿ ಎಫಿಷಿಯರ್ಟಿಸಿ ಆಡಿಟ್ ಮಾಡುವುದು ನ್ಯಾಯವಲ್ಲವೇ?

ಮಾನ್ಯ ಶ್ರೀ ಎಚ್. ಸಿ. ದಾನಪ್ಪನವರು.—ಅದು ಅಭಿಪ್ರಾಯ.

ಶ್ರೀ ಎಲ್. ಎಚ್. ತಿಮ್ಮಾಬೋಯಿಯವರು.—ಲಕ್ಕವಳ್ಳಿಪ್ರಾಜೆಕ್ಟು, ನುಗು ಪ್ರಾಜೆಕ್ಟು, ಜೋಗ್ ಪ್ರಾಜೆಕ್ಟ್ ಇರೆಲ್ಲಾ ಎಫಿಷಿಯರ್ಟಿಸಿ ಆಡಿಟ್ ಮಾಡಿದ್ದಾರೆಯೇ?

ಮಾನ್ಯ ಶ್ರೀ ಎಚ್. ಸಿ. ದಾನಪ್ಪನವರು.—ನೋಟೀಸ್.

ಶ್ರೀ ಎಲ್. ಎಚ್. ತಿಮ್ಮಾಬೋಯಿಯವರು.—ಮಾಡಿಲ್ಲದೇ ಇದ್ದರೆ ಈಗಲಾದರೂ ಮಾಡಿಸುತ್ತೀರಾ?

ಮಾನ್ಯ ಶ್ರೀ ಎಚ್. ಸಿ. ದಾನಪ್ಪನವರು.—ಮಾಡಿಸಬಹುದು. ಅಡ್ಡಿ ಇಲ್ಲ.

ಶ್ರೀ ಎಸ್. ರಂಗರಾಮಯ್ಯನವರು (ಮೈಸೂರು ಜಿಲ್ಲೆ).—ಎಫಿಷಿಯರ್ಟಿಸಿ ಆಡಿಟ್‌ನಲ್ಲಿ ಹಣ ದುರುಪಯೋಗವಾಗಿರುವುದು ಒಂದೇ ಅಲ್ಲದೇ, ಕೆಲಸಕಾರ್ಯಗಳು ಸಮರ್ಪಕವಾಗಿದೆಯೇ, ಇಲ್ಲವೇ ಎಂಬುದನ್ನು ನೋಡುತ್ತಾರೆಯೇ?

ಮಾನ್ಯ ಶ್ರೀ ಎಚ್. ಸಿ. ದಾನಪ್ಪನವರು.—ಎರಡೂ ಇದೆ.

ಶ್ರೀ ಎಸ್. ರಂಗರಾಮಯ್ಯನವರು.—ಕೆಲಸಕಾರ್ಯಗಳು ಸಮರ್ಪಕವಾಗಿದೆ ಎಂಬ ವಿಚಾರದಲ್ಲಿ ಈಗ ಎಷ್ಟು ಆಫೀಸುಗಳ ಸಂಬಂಧದಲ್ಲಿ ವರದಿ ಬಂದಿದೆ?

ಮಾನ್ಯ ಶ್ರೀ ಎಚ್. ಸಿ. ದಾನಪ್ಪನವರು.—ಉತ್ತರದಲ್ಲೇ ಕೊಟ್ಟಿದೆ.

ಶ್ರೀ ಎಸ್. ರಂಗರಾಮಯ್ಯನವರು.—366 ಆಫೀಸುಗಳ ಕೆಲಸಕಾರ್ಯಗಳ ವಿಚಾರದಲ್ಲಿ ಬಂದಿದೆ. ಇದರಲ್ಲಿ ಮುನಿಸಿಪಾಲಿಟಿಗೆ ಸಂಬಂಧಪಟ್ಟಂತೆ ಒಂದು ಆಫೀಸಿನಲ್ಲಿ ಮಾತ್ರ ಎಫಿಷಿಯರ್ಟಿಸಿ ಆಡಿಟ್ ಆಗಿದೆ. ಈಗ ಮುನಿಸಿಪಾಲಿಟಿಗಳಲ್ಲಿ ಅನೇಕ ವರ್ಷಗಳಿಂದ ಆಡಿಟ್ ನಡೆಯುತ್ತಾ ಇಲ್ಲದಿರುವುದು ಗೊತ್ತೆ?

ಮಾನ್ಯ ಶ್ರೀ ಎಚ್. ಸಿ. ದಾನಪ್ಪನವರು.—ಇನ್ನು ಮುಂದೆ ವಿಲೇಜ್ ಪಂಚಾಯಿತಿ, ಮುನಿಸಿಪಾಲಿಟಿ, ಡಿಸ್ಟ್ರಿಕ್ಟ್ ಬೋರ್ಡುಗಳ ಆಡಿಟ್ ನುವ್ಯವಸ್ಥಿತವಾಗಿ ನಡೆಸುವುದು ನ್ಯಾಯವಾಗಿದೆ. ಈಗ ಅದನ್ನು ಲೋಕಲ್ ಫಂಡ್ ಆಡಿಟ್ ಡಿಪಾರ್ಟ್‌ಮೆಂಟ್‌ಗೆ ಒಪ್ಪಿಸಿದ್ದೇವೆ.

ಶ್ರೀ ಎಸ್. ರಂಗರಾಮಯ್ಯನವರು.—ಬಾಕಿ ಮುನಿಸಿಪಾಲಿಟಿಗಳಲ್ಲಿ ಏಕೆ ಮಾಡಿಲ್ಲ?

ಮಾನ್ಯ ಶ್ರೀ ಎಚ್. ಸಿ. ದಾನಪ್ಪನವರು.—ಅದು ರೆಗ್ಯುಲರ್ ಆಡಿಟ್‌ಮಾಡತಕ್ಕವರ ಕರ್ತವ್ಯ. ಎಲ್ಲಾದರೂ ನ್ಯೂನತೆ ಹೆಚ್ಚಾಗಿ ಕಂಡುಬಂದರೆ ಎಫಿಷಿಯರ್ಟಿಸಿ ಆಡಿಟ್‌ಮಾಡುತ್ತಾರೆಯೇ ಹೊರತು ಇಲ್ಲದೇ ಇದ್ದರೆ ಇಲ್ಲ. ಸರ್ಕಾರದ ಎಲ್ಲಾ ಇಲಾಖೆಗಳನ್ನು ನೋಡುವುದಕ್ಕೆ ಶ್ರೀ ಮಾದಯ್ಯಗೌಡರು ಹೇಳಿದಹಾಗೆ ಶಿಬ್ಬಂದಿ ಸಾಲದು. ಸ್ಥಳೀಯ ಸಂಸ್ಥೆಗಳನ್ನು ನೋಡಬೇಕೆಂದರೆ ಇನ್ನೂ ಹೆಚ್ಚು ಶಿಬ್ಬಂದಿ ಬೇಕಾಗುತ್ತದೆ. ಇವುಗಳನ್ನು ನೋಡಬೇಕಾದ ಅವಶ್ಯಕತೆ ಇದ್ದರೂ ಇದಕ್ಕಿಂತ ವಿಶೇಷವಾಗಿ ಸರ್ಕಾರಿ ಆಫೀಸುಗಳನ್ನು ನೋಡಿಕೊಳ್ಳಬೇಕಾದ್ದು ಅವರ ಪ್ರಥಮ ಕರ್ತವ್ಯ. ಮುನಿಸಿಪಾಲಿಟಿಯಲ್ಲಿ ಅವರಿಗೆ ಬೇಕಾದಂಥ ಏರ್ಪಾಡನ್ನುಮಾಡಿಕೊಳ್ಳಲು ಮುನಿಸಿಪಲ್ ಕೌನ್ಸಿಲ್‌ಗೆ ಸರ್ವಾಧಿಕಾರವೂ ಇದೆ.

ಶ್ರೀ ಎಸ್. ರಂಗರಾಮಯ್ಯನವರು.—ಹಾಗಾದರೆ ಮುನಿಸಿಪಾಲಿಟಿಯವರು ಕೇಳಿಕೊಂಡರೆ ಮಾತ್ರ ಕಳುಹಿಸುತ್ತೀರಿ, ಅವರೇ ನೇರವಾಗಿ ಪ್ರವೇಶಮಾಡುವುದಿಲ್ಲ ಅಲ್ಲವೇ?

ಮಾನ್ಯ ಶ್ರೀ ಎಚ್. ಸಿ. ದಾನಪ್ಪನವರು.—ಪ್ರವೇಶ ಮಾಡಬಹುದು. ಅದು ಅನುಕೂಲತೆಯ ಮೇರೆ ಹೋಗುತ್ತದೆ. ಸಂಸ್ಥಾನದಲ್ಲಿರತಕ್ಕ ಮುನಿಸಿಪಾಲಿಟಿಗಳನ್ನೆಲ್ಲಾ ನೋಡಬೇಕೆಂದರೆ ಅದು ಅಸಾಧ್ಯವಾದ ಕೆಲಸವಾಗುತ್ತದೆ. ಆದ್ದರಿಂದ ಎಲ್ಲಾದರೂ ಆಕ್ಷೇಪಣೆ ಬಂದರೆ ಆಗ ಎಫಿಷಿಯರ್ಟಿಸಿ ಆಡಿಟ್‌ನವರು ನೋಡುತ್ತಾರೆ.

ಶ್ರೀ ಎಸ್. ರಂಗರಾಮಯ್ಯನವರು.—ಅಂತೂ ಮುನಿಸಿಪಾಲಿಟಿಯಲ್ಲಿ ಆಕ್ಷೇಪಣೆ ಬಂದರೆ ಆಡಿಟ್ ಮಾಡಿಸುತ್ತೀರಾ?

ಮಾನ್ಯ ಶ್ರೀ ಎಚ್. ಸಿ. ದಾನಪ್ಪನವರು.—ಸಾಧ್ಯವಾದಷ್ಟು ಮಾಡಿಸುವುದಕ್ಕೆ ಪ್ರಯತ್ನಪಡುತ್ತೇವೆ.

ಶ್ರೀ ಎಚ್. ಎಂ. ಚನ್ನಬಸಪ್ಪನವರು (ಮೈಸೂರು ಜಿಲ್ಲೆ).—ಫ್ರಡ್ ಸಪ್ಲೈಸ್‌ನಲ್ಲಿ 91 ಡಿಪೋ ಆಡಿಟ್ ಆಗಿದೆ ಎಂದು ಹೇಳಿದ್ದೀರಿ. ಇದರಲ್ಲಿ ಕೃಷ್ಣರಾಜನಗರ, ಬೆಟ್ಟದಪುರ, ನೆಲಮಂಗಲ ಇವುಗಳ ಡಿಪೋಗಳೂ ಸೇರಿವೆಯೇ?

ಮಾನ್ಯ ಶ್ರೀ ಎಚ್. ಸಿ. ದಾನಪ್ಪನವರು.—ನೋಟೀಸ್.

ಶ್ರೀ ಎಚ್. ಎಂ. ಚನ್ನಬಸಪ್ಪನವರು.—ಎಫಿಷಿಯರ್ಟಿಸಿ ಆಡಿಟ್ ಇದ್ದೂ ಕೂಡ ಇ—ಎಫಿಷಿಯರ್ಟಿಸಿ ಹೆಚ್ಚಾಗುತ್ತಾ ಇರುವುದಕ್ಕೆ ಕಾರಣ?

ಮಾನ್ಯ ಶ್ರೀ ಎಚ್. ಸಿ. ದಾನಪ್ಪನವರು.—ಅದನ್ನು ಒಪ್ಪುವುದಿಲ್ಲ.

License to an Industrialist to import paper worth Six lakhs of Rupees.

*ಪ್ರಶ್ನೆ 147.—ಶ್ರೀ ವಿ. ಎಸ್. ನಾರಾಯಣರಾಯರು (ಬೆಂಗಳೂರು ನಗರ).—

ಈ ಕೆಳಗೆ ಕೇಳಿರುವ ಸಂಗತಿಗಳನ್ನು ಸರ್ಕಾರದವರು ದಯೆಯಿಟ್ಟು ತಿಳಿಸಬೇಕೆಂದು ಪ್ರಾರ್ಥನೆ:—

(a) ಮೈಸೂರು ಸರ್ಕಾರದ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯ ಡೈರೆಕ್ಟರವರ ಪ್ರಬಲವಾದ

(ಶ್ರೀ ವಿ. ಎಸ್. ನಾರಾಯಣರಾಯರು.)

ಶಿಫಾರಸಿನಮೇಲೆ ಮೈಸೂರು ಸಂಸ್ಥಾನದಲ್ಲಿರುವ ವ್ಯಾಪಾರೋದ್ಯಮಿಯವರೊಬ್ಬರಿಗೆ ವಿದೇಶದಿಂದ 6 ಲಕ್ಷ ರೂಪಾಯಿಗಳ ಬೆರೆಬಾಳತಕ್ಕ ಕಾಗದವನ್ನು ಆಮದುಮಾಡಲು ಲೈಸೆನ್ಸನ್ನು ಕೊಡಲಾಗಿದೆಯೆಂಬುದಾಗಿ 1951ನೆಯ ಇಸವಿ ಫೆಬ್ರವರಿ 22ನೆಯ ತಾರೀಖು ಕೇಂದ್ರ ಪಾರ್ಲಮೆಂಟ್ ಸಭೆಯಲ್ಲಿ ಕೈಗಾರಿಕೆ ಮತ್ತು ವಾಣಿಜ್ಯ ಶಾಖೆಯ ಮಾನ್ಯ ಸಚಿವರಾದ ಶ್ರೀ ಹರೇಕೃಷ್ಣಮೆಹತಾಬ್‌ರವರು ಕೊಟ್ಟ ಉತ್ತರವು ಸರ್ಕಾರದವರ ಗಮನಕ್ಕೆ ಬಂದಿದೆಯೆ;

(b) ಆ ರೀತಿಯಾಗಿ ಶಿಫಾರಸು ಮಾಡಲ್ಪಟ್ಟ ಆ ವ್ಯಾಪಾರೋದ್ಯಮಿಯವರು ಯಾರು;

(c) ಆ ಶಿಫಾರಸನ್ನು ಮಾಡಿದ ಡೈರೆಕ್ಟರು ಯಾರು;

(d) ಡೈರೆಕ್ಟರವರು, ಈ ರೀತಿಯಾಗಿ ಆಮದು ಲೈಸೆನ್ಸುಗಳ ಸಂಬಂಧದಲ್ಲಿ ಶಿಫಾರಸು ಮಾಡಿರುವ ಇತರ ಸಂದರ್ಭಗಳು ಯಾವುದಾದರೂ ಇವೆಯೆ;

(e) ಹಾಗೆ ಇದ್ದಪಕ್ಷದಲ್ಲಿ ಅವು ಯಾವುವು; ಆ ರೀತಿಯಾಗಿ ಶಿಫಾರಸು ಮಾಡಲ್ಪಟ್ಟ ಆಸಾಮಿಗಳು ಯಾರು;

(f) ಒಂದು ಲಕ್ಷ ರೂಪಾಯಿಗಳಿಗೆ ಮೇಲ್ಪಟ್ಟಂತೆ ಆಮದು ಲೈಸೆನ್ಸುಗಳಿಗಾಗಿ ಶಿಫಾರಸುಮಾಡಲ್ಪಟ್ಟಿರುವ ಆಸಾಮಿಗಳ ಅಥವಾ ಕಂಪೆನಿಗಳ ಹೆಸರುಗಳನ್ನು ಒದಗಿಸಲಾಗುತ್ತದೆಯೆ;

(g) ಈ ಪರ್ಮಿಟ್ಟುಗಳ ಪ್ರಯೋಜನವನ್ನು ಉಪಯೋಗಿಸಿಕೊಂಡು ವಿದೇಶಗಳಿಂದ ಪದಾರ್ಥಗಳನ್ನು ಆಮದುಮಾಡಿರತಕ್ಕವರ ಸಂಖ್ಯೆ ಎಷ್ಟು;

(h) ಆ ರೀತಿಯಾಗಿ ಆಮದುಮಾಡಲ್ಪಟ್ಟ ಪದಾರ್ಥಗಳ ಸ್ವಭಾವವೇನು? ಮತ್ತು ಅವುಗಳ ಬೆಲೆ ಎಷ್ಟು?

ಉತ್ತರ.—ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು (ಆರ್ಥಿಕ ಮತ್ತು ಕೈಗಾರಿಕಾ ಸಚಿವರು).—(a) ಹೌದು.

(b) ಮೆಸ್ಸರ್ಸ್ ಷಾ ಕಪೂರ್‌ಚಂದ್, ತಾರಾಚಂದ್ ಅಂಡ್ ಕಂಪೆನಿ, ಬೆಂಗಳೂರು.

(c) ಶ್ರೀ ಆರ್. ರಾಮಕೃಷ್ಣ, ಅವರು, ಸರ್ಕಾರದ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯ ಡೈರೆಕ್ಟರವರು.

(d) ಹೌದು, ಇವೆ.

(e) ಮತ್ತು (f) ಕೆಳಗಡೆ ಒದಗಿಸಿರತಕ್ಕ ತಖ್ತೆಯನ್ನು ದಯೆಯಿಟ್ಟು ನೋಡಿ.

(g) ಈ ಸಂಗತಿಗಳು ದೊರೆಯುವಂತಿಲ್ಲ.

(h) ಈ ಪ್ರಶ್ನೆಗೆ ಅವಕಾಶವಿಲ್ಲ.

1950ನೆಯ ಇಸವಿ ಜನವರಿ 1ನೆಯ ತಾರೀಖಿನ ಲಾಗಾಯಿತು "ಇಂಪೋರ್ಟ್ ಟ್ರೇಡ್ ಕಂಟ್ರೋಲ್" ಇಸ್ತಿಹಾರ್ನಾಮೆಯ ಮೇರೆಗೆ ಸಂಸ್ಥಾನದಲ್ಲಿರುವ ವ್ಯಾಪಾರೋದ್ಯಮಿಗಳು ಅಥವಾ ಕಂಪೆನಿಗಳು, ಒಂದು ಲಕ್ಷ ರೂಪಾಯಿಗಳಿಗೆ ಮೇಲ್ಪಟ್ಟು ಬೆರೆಬಾಳತಕ್ಕ ಸಾಮಾನುಗಳನ್ನು ಆಮದು ಮಾಡುವುದಕ್ಕಾಗಿ, ಆಮದುಗಳ "ಚೀಫ್ ಕಂಟ್ರೋಲರವರಿಗೆ" ಬರೆದುಕೊಂಡ ಅರ್ಜಿಗಳು ಸರಿಯಾಗಿವೆಯೇ ಎಂಬುದನ್ನು ಪರಿಶೀಲಿಸಿ ಆ ಬಗ್ಗೆ ಸರ್ಟಿಫಿಕೇಟುಗಳನ್ನು ಅವರಿಂದ ಪಡೆದಿರುವ ವ್ಯಾಪಾರೋದ್ಯಮಿಗಳ ಅಥವಾ ಕಂಪೆನಿಗಳ ಹೆಸರುಗಳನ್ನು ತೋರಿಸತಕ್ಕ ತಖ್ತೆ.

ಸಂಖ್ಯೆ	ವ್ಯಾಪಾರೋದ್ಯಮಿಯವರ ಅಥವಾ ಕಂಪೆನಿಯ ಹೆಸರು ಮತ್ತು ವಿಳಾಸ.	ಸರ್ಟಿಫಿಕೇಟನ್ನು ಸಾದರುಮಾಡಿದ ತಾರೀಖು.	ಸಾಮಾನುಗಳ ವಿವರ
	"ವಿಶ್ವಕರ್ಣಾಟಕ ದಿನಪತ್ರಿಕೆ,"		
1	"ಇಂಡಿಯಾ ಪಬ್ಲಿಕೇಷನ್ಸ್, ಲಿಮಿಟೆಡ್" ಬೆಂಗಳೂರು.	24—1—1950	ವೃತ್ತಪತ್ರಿಕೆಗಳನ್ನು ಮುದ್ರಣಮಾಡುವ ಕಾಗದ.
2	ಶ್ರೀ ಕೃಷ್ಣಾನೆಯ್ಗೆ ಕಾರ್ಖಾನೆ, ಬೆಂಗಳೂರು ಸಿಟಿ.	24—1—1950	ಬಣ್ಣಗಳು ("ವ್ಯಾಟ್‌ಡೈಸ್")
3	ಬೆಂಗಳೂರು "ಉಲ್ಲ್ಕ, ಕಾಟ್ಕ ಅಂಡ್ ಸಿಲ್ಕ್ ಮಿಲ್ಸ್ ಕಂಪೆನಿ" ಲಿಮಿಟೆಡ್, ಬೆಂಗಳೂರು.	31—1—1950	ಕಚ್ಚಾ ಉಣ್ಣೆ
4	ಮೈಸೂರು ರೇಷ್ಮೆ ಕಾರ್ಖಾನೆ—ಮೆನರ್ಸ್ ಚಂದಿರಾಮ್ ಬ್ರದರ್ಸ್, ಬೆಂಗಳೂರು.	8—3—1950	ಕಚ್ಚಾ ರೇಷ್ಮೆ
5	ಸ್ಯೂಡೀಸ್ ಅಂಡ್ ಲೆದರೆಟ್ಸ್, ಲಿಮಿಟೆಡ್, ದೊಮ್ಮಲೂರು ರಸ್ತೆ, ಬೆಂಗಳೂರು.	24—4—1950	ರಾಸಾಯನಿಕ ವಸ್ತುಗಳು ("ಕೆಮಿಕಲ್ಸ್").
6	ಶ್ರೀಕೃಷ್ಣನೆಯ್ಗೆಕಾರ್ಖಾನೆ,ಬೆಂಗಳೂರು	17 - 7—1950	"ಆರ್ಟ್‌ಸಿಲ್ಕ್"
7	ರೇಡಿಯೋ ಮತ್ತು ಎಲೆಕ್ಟ್ರಿಕಲ್ಸ್ ಮ್ಯಾನ್ಯುಫ್ಯಾಕ್ಚರಿಂಗ್ ಕಂಪೆನಿ, ಲಿಮಿಟೆಡ್, ಬೆಂಗಳೂರು.	18—5—1950	ರಾಸಾಯನಿಕ ವಸ್ತುಗಳು
8	"ಯುನೈಟೆಡ್ ಬ್ರುಯೆರೀಸ್, ಲಿಮಿಟೆಡ್" ಬೆಂಗಳೂರು.	22—7—1950	ಸಿಕಂಜಿ ("ಮಾಲ್ಟ್")
9	"ಟ್ಯುಬಾಕೋ ಮ್ಯಾನ್ಯುಫ್ಯಾಕ್ಚರರ್ಸ್ (ಇಂಡಿಯಾ) ಲಿಮಿಟೆಡ್, ಫ್ರೇಜರ್ ಟೌನ್", ಬೆಂಗಳೂರು.	26—7—1950	ಸಿಗರೇಟ್ ಕಾಗದ

ಸಂಖ್ಯೆ	ವ್ಯಾಪಾರೋದ್ಯಮಿಯವರ ಅಥವಾ ಕಂಪೆನಿಯ ಹೆಸರು ಮತ್ತು ವಿಳಾಸ.	ಸರ್ಟಿಫಿಕೇಟನ್ನು ಸಾದರುಮಾಡಿದ ತಾರೀಖು.	ಸಾಮಾನುಗಳ ವಿವರ
10	ನಾರ್ದನ್ ಕೆಮಿಕಲ್ ವರ್ಕ್ಸ್, 527, 15ನೆಯ ಕ್ರಾಸ್, ಮಲ್ಲೇಶ್ವರಂ.	24—7—1950	ರಸಾಯನ ವಸ್ತುಗಳಿಂದ ತಯಾರಿಸಿದ ಪರಿಮಳದ ಎಣ್ಣೆಗಳು (" ಸಿಂತೆಟಿಕ್ ಎಸ್ಸೆನ್'ಷಿಯಲ್ ಆಯಿಲ್ಸ್"). " ಆರೋಮ್ಯಾಟಿಕ್ ಕೆಮಿಕಲ್ಸ್ " ಸುವಾಸನಾ ದ್ರವ್ಯಗಳು. ಪ್ರಕೃತಿ ಸಿದ್ಧವಾಗಿ ಬೆಳೆದ ವಸ್ತುಗಳಿಂದ ತೆಗೆದ ಪರಿಮಳದ ಎಣ್ಣೆಗಳು. " ನ್ಯಾಚ್ಯುರಲ್ ಎಸೆನ್'ಷಿಯಲ್ ಆಯಿಲ್ಸ್". " ಬ್ಯೂಟರಿಕ್ ಆಸಿಡ್ ಕಾರ್ ಬೈಟೋರ್ ".
11	" ಗೋದಾ ಇಂಡಸ್ಟ್ರೀಸ್ " ವಾಣೀ ವಿಲಾಸ ಮೊಹಲ್ಲಾ, ಮೈಸೂರು.	16—8—1950	ಸೀನದ ಕಡ್ಡಿಗಳನ್ನು ತಯಾರಿಸುವ ಯಂತ್ರಗಳು.
12	ಬೆಂಗಳೂರು " ಉಲ್ಲೆ, ಕಾಟನ್ ಅಂಡ್ ಸಿಲ್ಕ್ ಮಿಲ್ಸ್ ಕಂಪೆನಿ," ಲಿಮಿಟೆಡ್, ಬೆಂಗಳೂರು.	22—8—1950	ಕಚ್ಚಾ ರೇಷ್ಮೆ
13	ಬೆಂಗಳೂರು " ಉಲ್ಲೆ, ಕಾಟನ್ ಅಂಡ್ ಸಿಲ್ಕ್ ಮಿಲ್ಸ್ ಕಂಪೆನಿ," ಲಿಮಿಟೆಡ್, ಬೆಂಗಳೂರು.	24—8—1950	ಡಿಜೋ
14	" ಟುಬ್ಯಾಕೋ ಮ್ಯಾನ್ಯುಫ್ಯಾಕ್ಚರರ್ಸ್ (ಇಂಡಿಯಾ) ಲಿಮಿಟೆಡ್, ಕಂಪೆನಿ, ಫ್ರೇಜರ್‌ಟೌನ್, ಬೆಂಗಳೂರು.	12—9—1950	"ಕ್ರಾಷ್ಟ್ ಪಾಯಿಲ್" ("ರ್ಯಾಪರ್ಸ್")
15	ನರ್ಕಾರಿ ಸಾಬೂನು ಕಾರ್ಖಾನೆ, ಬೆಂಗಳೂರು.	26—9—1950	ಪ್ರಕೃತಿ ಸಿದ್ಧವಾಗಿ ಬೆಳೆದ ವಸ್ತುಗಳಿಂದ ತೆಗೆದ ಪರಿಮಳದ ಎಣ್ಣೆಗಳು (" ನ್ಯಾಚುರರ್ ಎಸೆಷಿಯಲ್ ಆಯಿಲ್ಸ್").
16	ಬೆಂಗಳೂರು " ಉಲ್ಲೆ, ಕಾಟನ್ ಅಂಡ್ ಸಿಲ್ಕ್ ಮಿಲ್ಸ್ ಕಂಪೆನಿ," ಲಿಮಿಟೆಡ್, ಬೆಂಗಳೂರು.	28—9—1950	" ಸೋಡ ಆಷ್" ಮತ್ತು " ಕಾಸ್ಟಿಕ್ ಸೋಡ".
17	ಬೆಂಗಳೂರು " ಉಲ್ಲೆ, ಕಾಟನ್ ಅಂಡ್ ಸಿಲ್ಕ್ ಮಿಲ್ಸ್ ಕಂಪೆನಿ" ಲಿಮಿಟೆಡ್, ಬೆಂಗಳೂರು.	3—10—1950	ಕಚ್ಚಾ ರೇಷ್ಮೆ
18	ನ್ಯೂಡೀಸ್ ಅಂಡ್ ಲೆದರೆಟ್ಸ್, ಲಿಮಿಟೆಡ್, ದೊಮ್ಮಲೂರು ರಸ್ತೆ, ಬೆಂಗಳೂರು.	8—11—1950	ಕಾರ್ಟಪ್ಲಾಕ್ ಎಸ್. ಆರ್. ಮ್ಯಾಟ್ ಫೈಬರ್ ಅಸೆಟೋಲ್, ಇತರ ಬಾಬುಗಳೂ ಸೇರಿ.
19	" ಜೋಡೇ ರಿಬ್ಬ ಕಾರ್ಬನ್ ಅಂಡ್ ಆಲೈಡ್ ಇಂಡಸ್ಟ್ರೀಸ್," ಬೆಂಗಳೂರು.	21—11—1950	ಚೆಲುವೆಮಾಡಿದ ಹತ್ತಿಯ ಚೀಪು ಕಚ್ಚಾ ರೇಷ್ಮೆ, ಟೈಪ್‌ರೈಟರ ನೂಲು ಸುತ್ತುವ ರೀಲುಗಳು, ಪ್ಲಾಸ್ಟಿಕ್ ಫೈಬರ್ ಕಾರ್ಬೊನೈಸಿಂಗ್ ಟಿಸ್ಯೂ ಪೇಪರ್, ಕೃತಕ ರೇಷ್ಮೆ.
20	" ಮೈಸೂರು ಲ್ಯಾಂಪ್ ವರ್ಕ್ಸ್, ಲಿಮಿಟೆಡ್," ಬೆಂಗಳೂರು.	...	ಗಾಜಿನ ಬಲ್ಬುಗಳು, ಟ್ಯೂಬುಗಳು ಮತ್ತು ರಾಡುಗಳು.
21	" ಶ್ರೀರಾಮ ಸಿಲ್ಕ್ ಮಿಲ್ಸ್, ಲಿಮಿಟೆಡ್, " ಬೆಂಗಳೂರು.	22—11—1950	ಕಚ್ಚಾ ರೇಷ್ಮೆ
22	ಜಾಕ್ಟೈಲರ್ ಅಂಡ್ ನನ್ಸ್, ಕೆ. ಜಿ. ಎಫ್. ಮೈನಿಂಗ್ ಬೋರ್ಡ್, ಉರಿಗಂ.	23—11—1950	ಕ್ಯಾಲ್ಸಿಯಂ ಕಾರ್ಬೈಡ್
23	" ಮೈಸೂರ್ ಕಮರ್ಷಿಯಲ್ ಯೂನಿಯನ್ ", ಬೆಂಗಳೂರು.	28—11—1950	ಕೃತಕ ಕೇಸಿನ್ ಗ್ಲೂ ಅಂಟು

(ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.)

ಸಂಖ್ಯೆ	ವ್ಯಾಪಾರೋದ್ಯಮಿಯವರ ಅಥವಾ ಕಂಪೆನಿಯ ಹೆಸರು ಮತ್ತು ವಿಳಾಸ	ಸರ್ಟಿಫಿಕೇಟನ್ನು ಸಾದರುಮಾಡಿದ ತಾರೀಖು	ಸಾಮಾನುಗಳ ವಿವರ
24	ಬೆಂಗಳೂರು " ಉಲ್ಲನ್, ಕಾಟನ್ ಅಂಡ್ ಸಿಲ್ಕ್ ಮಿಲ್ಸ್ ಕಂಪೆನಿ ", ಲಿಮಿಟೆಡ್, ಬೆಂಗಳೂರು.	28—11—1950	ಕಚ್ಚಾ ರೇಷ್ಮೆ
25	ಬೆಂಗಳೂರು " ಉಲ್ಲನ್, ಕಾಟನ್ ಅಂಡ್ ಸಿಲ್ಕ್ ಮಿಲ್ಸ್ ಕಂಪೆನಿ " ಲಿಮಿಟೆಡ್, ಬೆಂಗಳೂರು.	8—12—1950	ಕೃತಕ ರೇಷ್ಮೆ
26	ತಾರಾಚಂದ್ ಕಪೂರ್‌ಚಂದ್ ಅಂಡ್ ಕಂಪೆನಿ, ಬೆಂಗಳೂರು ಸಿಟಿ.	28—11—1950	ಕಾಗದದ ಚೀಲಗಳನ್ನು ತಯಾರಿಸಲು 'ಕ್ರಾಫ್ಟ್' ಕಾಗದ.

ಶ್ರೀ ವಿ. ಎಸ್. ನಾರಾಯಣರಾಯರು.—ಎಷ್ಟಕ್ಕೆ ಅವರು ಲೈಸನ್ಸ್ ಕೇಳಿದ್ದು?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ನೋಟೀಸ್.

ಶ್ರೀ ವಿ. ಎಸ್. ನಾರಾಯಣರಾಯರು.—ಮುನ್ನೂರು ಟನ್‌ಗಳಿಗೆ ಕೇಳಿದ್ದರೆ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಗೊತ್ತಿಲ್ಲ, ನೋಟೀಸ್ ಬೇಕು.

ಶ್ರೀ ವಿ. ಎಸ್. ನಾರಾಯಣರಾಯರು.—ಬೆಲೆ ಏರಿದುದರಿಂದ ಇನ್ನೂ ಜಾಸ್ತಿ ಬೇಕಾಗಿ ರೆಟರ್ ಆಫ್ ಕ್ರೆಡಿಟ್ ಬೇಕೆಂದು ಕೇಳಿದರೆ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ನೋಟೀಸ್.

ಶ್ರೀ ವಿ. ಎಸ್. ನಾರಾಯಣರಾಯರು — ಏಕೆ ಅವರು ಆ ಪೇಪರ್ ಬೇಕೆಂದು ಹೇಳಿದರು?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಅದನ್ನು ಉತ್ತರದ ಪರಿಶಿಷ್ಟದಲ್ಲೇ ತಿಳಿಸಿದೆ. Craft paper for paper bags ಎಂದು ತಿಳಿಸಿದೆ.

ಶ್ರೀ ವಿ. ಎಸ್. ನಾರಾಯಣರಾಯರು.—ಈ ಕೈಗಾರಿಕೆ ಇದುವರೆಗೂ ಮೈಸೂರು ಸಂಸ್ಥಾನದಲ್ಲಿದೆಯೇ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಈ ಕೈಗಾರಿಕೆ ಇರಬೇಕೆಂಬುದನ್ನು ಇಲಾಖೆಯವರು ಮನದಟ್ಟು ಮಾಡಿಕೊಂಡು ಕೊಟ್ಟಿರಬೇಕು.

ಶ್ರೀ ವಿ. ಎಸ್. ನಾರಾಯಣರಾಯರು.—ಮೈಸೂರು ಸಂಸ್ಥಾನದಲ್ಲಿ ಈ ಪೇಪರ್‌ಬ್ಯಾಗ್ಸ್ ಕೈಗಾರಿಕೆ ಇಲ್ಲದೇ ಇರುವುದರಿಂದ, ನಾವು ಇದನ್ನು ಮಾಡಬೇಕು, ಆದುದರಿಂದ ಇದಕ್ಕೆ ಈ ಅನುಕೂಲ ಮಾಡಿಕೊಡಿ ಎಂದು ತಾನೇ ಅವರು ಕೇಳಿದ್ದು?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಆ ವಿವರಗಳನ್ನು ಹೇಳಲು ನೋಟೀಸ್ ಬೇಕು.

ಶ್ರೀ ವಿ. ಎಸ್. ನಾರಾಯಣರಾಯರು.—ಹಾಗಾದರೆ ಏನೂ ತಿಳಿದುಕೊಳ್ಳದೆ ಕೊಟ್ಟಿರಾ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಅವರು ತಮಗೆ ಬೇಕೆಂದು ಇಲಾಖೆಗೆ ತಿಳಿಸಿದ್ದಾರೆ.

ಶ್ರೀ ವಿ. ಎಸ್. ನಾರಾಯಣರಾಯರು.—How many persons have availed themselves of these permits and imported articles from abroad and the nature and value of articles so imported ಎಂದು ನಾನು ಕೇಳಿದ್ದೇನೆ.

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಅದಕ್ಕೆ ಉತ್ತರ ಕೊಟ್ಟಿದೆ.

ಶ್ರೀ ವಿ. ಎಸ್. ನಾರಾಯಣರಾಯರು.—ಈಗಲಾದರೂ ಅವರು ಎಷ್ಟು ತರಿಸಿದ್ದಾರೆಂದು ನೋಜೋಣವಾಗುತ್ತದೆಯೆ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ತಾವು ಯಾವ ಉದ್ದೇಶದಿಂದ ಕೇಳುತ್ತಿದ್ದೀರೆಂಬುದು ಅರ್ಥವಾಗಲಲ್ಲ.

ಶ್ರೀ ವಿ. ಎಸ್. ನಾರಾಯಣರಾಯರು.—ನಾನು ಕೇಳಿದುದು ಒಳ್ಳೆಯ ಉದ್ದೇಶದಿಂದ.

The Hon'ble Sri H. C. DASAPPA.—May I know what the Hon'ble Member is driving at? I am unable to follow the Hon'ble Member.

ಶ್ರೀ ವಿ. ಎಸ್. ನಾರಾಯಣರಾಯರು.—ಇದರಲ್ಲಿರುವ ವಿಷಯ ಇಷ್ಟೆ; ಕೇಂದ್ರ ಪಾರ್ಲಮೆಂಟಿನಲ್ಲಿ ಈ ವಿಷಯದಲ್ಲಿ ಪ್ರಶ್ನೆ ಬಂದಿತು. ಇದನ್ನು ಶ್ರೀ ಗೋಯಂಕಾರವರು ಕೇಳಿದರು. ಅವರೊಬ್ಬ ದೊಡ್ಡ ವೃತ್ತಪತ್ರಿಕಾ ಕರ್ತರೆಂಬುದು ಎಲ್ಲರಿಗೂ ಗೊತ್ತಿದೆ. ಅದನ್ನು ಏಕೆ ಅವರು ಕೇಳಿದರು ಎಂಬುದು ಈ ಸಭೆಗೆ ಗೊತ್ತಾಗಬೇಕೆಂಬ ಉದ್ದೇಶದಿಂದ ಕೇಳುತ್ತಿದ್ದೇನೆ.

The Hon'ble Sri H. C. DASAPPA.—It is far better if the Hon'ble Member makes whatever suggestions he choses instead of going round about. I would like him to be helpful to the Government.

Sri V. S. NARAYANA RAO.—Exactly, that is my idea. ಇದೇನೂ ದುರುದ್ದೇಶದಿಂದ ಕೇಳಿದ್ದಲ್ಲ, ಅವರು ಇಕಸಾಲ್ಟೆಂಟ್‌ಗೆ ಕೊಟ್ಟಿದ್ದಾರೆ. His license was going begging in Madras ಎಂಬ ಧ್ವನಿಯಿಂದ ಕೇಳಿದರು. ನಾನು ಮದ್ರಾಸಿನಲ್ಲಿ ಹೋದಾಗ ವಿಚಾರ ತಿಳಿದ ಮೇಲೆ, ನಾನೇ ವಿಚಾರ ಮಾಡದೆ.....

ಅಧ್ಯಕ್ಷರು.—ತಾವೇ ಹೇಳುತ್ತಿದ್ದೀರಲ್ಲ!

The Hon'ble Sri H. C. DASAPPA.—If the Hon'ble Member sends a note to me, I would go into the matter.

ಶ್ರೀ ವಿ. ಎಸ್. ನಾರಾಯಣರಾಯರು.—ಉತ್ತರದ ಪರಿಶಿಷ್ಟದಲ್ಲಿರುವಂತೆ ಬೆಂಗಳೂರು ಉಲ್ಲ್ ಅಂಡ್ ಕಾರ್ಟ್ ಮಿಲ್ಸ್‌ಗೆ 'ರಾ ಸಿಲ್ಕ್'ಗೆ ಆಗಸ್ಟ್ 22ನೆಯು ತಾರೀಖು ಪತ್ರ ಅದೇ ತಿಂಗಳು 24ನೆಯ ತಾರೀಖು ಸರ್ಟಿಫಿಕೇಟ್ ಕೊಡಲಾಗಿದೆ. ಎರಡು ದಿನಕ್ಕೊಮ್ಮೆ ಕೊಡುವುದರ ಅರ್ಥವೇನು?

ಮಾನ್ಯ ಶ್ರೀ ಎಚ್. ಸಿ. ದಾನಪ್ಪನವರು.—ಅರ್ಥ ವೇನೂ ಇಲ್ಲ, ಅವರು ಕೇಳಿದರು, ಮಾಮೂಲಾಗಿ ಕೊಡುವಂತೆ ಕೊಟ್ಟಿದ್ದೇವೆ, ಅಷ್ಟೆ.

ಶ್ರೀ ವಿ. ಎಸ್. ನಾರಾಯಣರಾಯರು.—ಗೋದಾ ಇಂಡಸ್ಟ್ರೀಸ್‌ನವರಿಗೆ pencil making machineryಗೆ ಲೈಸೆನ್ಸ್ ಕೊಡಲಾಗಿದೆ, ಅದನ್ನು ಅವರು ತರಿಸಿದ್ದಾರೆಯೆ ?

ಮಾನ್ಯ ಶ್ರೀ ಎಚ್. ಸಿ. ದಾನಪ್ಪನವರು.—ನೋಟೀಸ್.

ಶ್ರೀ ವಿ. ಎಸ್. ನಾರಾಯಣರಾಯರು.—ಬೇಕಾದಷ್ಟು ಅವಕಾಶ ಕೊಟ್ಟು ಪ್ರಶ್ನೆ ಕಳುಹಿಸಿದ್ದೇನೆ, ಉತ್ತರ ಹೇಳಬೇಡವೆ ?

ಮಾನ್ಯ ಶ್ರೀ ಎಚ್. ಸಿ. ದಾನಪ್ಪನವರು.—ಪ್ರಶ್ನೆ ಕಳುಹಿಸಿದಾಗಲೇ ಅದರಲ್ಲಿ ಗೋದಾ ಇಂಡಸ್ಟ್ರೀಸ್ ನವರು ಮೆಷಿನರಿಗಳನ್ನು ತರಿಸಿದ್ದಾರೆಯೆ ಎಂದು ಕೇಳಿದ್ದರೆ, ಉತ್ತರ ಬರುತ್ತಿತ್ತು. ಹಾಗಿಲ್ಲದೆ ನೂರಾರು ಕೈಗಾರಿಕೆಗಳಿವೆ, ಅವನ್ನೆಲ್ಲಾ ನೋಡಿಕೊಂಡು ಉತ್ತರ ಈಗ ಹೇಳುವುದಕ್ಕಾಗುವುದಿಲ್ಲ.

ಶ್ರೀ ವಿ. ಎಸ್. ನಾರಾಯಣರಾಯರು.—ಪೆರ್ಫಸಿಲ್ ಕೈಗಾರಿಕೆಗೆ ಬೇಕಾದ ಯಂತ್ರಗಳಿಗೆ ಸರ್ಟಿಫಿಕೇಟ್ ಕೊಟ್ಟಿದೆ, ಅದನ್ನು ತರಿಸಿದ್ದಾರೆಯೆ ಇಲ್ಲವೆ?

The Hon'ble Sri H. C. DASAPPA.—I cannot say that now.

ಶ್ರೀ ವಿ. ಎಸ್. ನಾರಾಯಣರಾಯರು.—Has the purpose been served? ಅವರು ಆ ಮೆಷಿನರಿಗಳನ್ನು ತರಿಸಿದ್ದಾರೆಯೆ, ಅದಕ್ಕೆ ರೈಸೆನ್ಸ್ ಕೊಟ್ಟಿದ್ದ ಉದ್ದೇಶ ಸಾರ್ಥಕವಾಗಿದೆಯೆ ಎಂಬುದನ್ನು ನೋಡಬೇಡವೆ?.....

The Hon'ble Sri H. C. DASAPPA.—Every question has been answered. The only thing is he has not indicated exactly what his troubles are. There is no need for any kind of argument. That is all what I can say. If you put questions you will get the answers. For other things I want notice. Let there be no discussions.

ಶ್ರೀ ಟಿ. ರಾಮಾಚಾರ್ಯರು (ಕೋಲಾರ ಜಿಲ್ಲೆ).—ಸರ್ಕಾರದವರು ಪರ್ಮಿಟ್ ಕೊಟ್ಟಮೇಲೆ ಅದು ಸರಿಯಾಗಿ ಉಪಯೋಗವಾಗಿದೆಯೇ ಇಲ್ಲವೆ ಎಂಬುದನ್ನು ವಿಮರ್ಶೆ ಮಾಡುವುದಿಲ್ಲವೆ?

ಮಾನ್ಯ ಶ್ರೀ ಎಚ್. ಸಿ. ದಾನಪ್ಪನವರು.—ಮಾಡುತ್ತಿದ್ದಾರೆ. ಆದರೆ ಅನೇಕ ಕೈಗಾರಿಕೆಗಳಿವೆ, ಉದಾಹರಣೆಗೆ ಬೆಂಗಳೂರು ಉಲ್ಲ್, ಕಾರ್ಟ್ ಮತ್ತು ಸಿಲ್ಕ್ ಮಿಲ್ಸ್‌ನವರು ರೇಷ್ಮೆ ತರಿಸುತ್ತಾರೆ, ಅವನ್ನು ಬಟ್ಟೆ ಮಾಡಿದರೆ ಇಲ್ಲವೆ, ಇನ್ನೊಬ್ಬರು ಮಿಷಿನರಿ ತರಿಸುತ್ತಾರೆ, ಅದನ್ನು ಉಪಯೋಗಿಸಿದರೆ ಇಲ್ಲವೆ ಇವೆಲ್ಲವನ್ನೂ ನೋಡುವುದೆಂದರೆ ಹೇಗೆ!

You cannot drag every little import to its finish. We normally take it that all men are honest and use them for the purpose for which they are intended.

ಶ್ರೀ ಟಿ. ರಾಮಾಚಾರ್ಯರು.—(ಜಿ) ಪ್ರಶ್ನೆಯಲ್ಲಿ how many persons have availed themselves of these permits and imported articles from abroad ಎಂದು ಕೇಳಿರುವುದಕ್ಕೆ no information ಎಂದು ಉತ್ತರ ಕೊಟ್ಟಿದ್ದೀರಿ, ಇದನ್ನು ವಿಚಾರಿಸುವುದಿಲ್ಲವೆ? ಈಗಲಾದರೂ ಉತ್ತರ ಬಂದಿದೆಯೆ?

The Hon'ble Sri H. C. DASAPPA.—We have not been able to get the information within the time available. If you want all these details, it takes time to collect them. We must write to all these departments and get it and it takes time.

Mr. SPEAKER.—Question No. 73. Sri T. Hunumiah. The Hon'ble Member is not present. It will be treated as an unstarred question.

Question No. 146. Sri W. H. Hanumanthappa. The Hon'ble Member is not present. This question also will be treated unstarred question.

Relieving the Indebtedness of Raiytas

*ಪ್ರಶ್ನೆ 226.—ಶ್ರೀ ಬಿ. ಚನ್ನಬೈರೇಗೌಡರು (ಬೆಂಗಳೂರು ಜಿಲ್ಲೆ)

ಈ ಕೆಳಗೆ ಕೇಳಿರುವ ಸಂಗತಿಗಳನ್ನು ಸರ್ಕಾರದವರು ದಯೆಯಿಟ್ಟು ತಿಳಿಸಬೇಕೆಂದು ಪ್ರಾರ್ಥನೆ :—

(a) ರೈತರ ಸಾಲಗಳನ್ನು ತೀರಿಸುವುದಕ್ಕೆ ಸರ್ಕಾರದವರು ಮಾಡಿರತಕ್ಕ ಏರ್ಪಾಡುಗಳೇನು;

(b) ಈ ಉದ್ದೇಶಕ್ಕಾಗಿ ಮಾಸಲಾಗಿಟ್ಟಿರತಕ್ಕ ಮೊಬಲಗೆಷ್ಟು; ರೈತರು ಸಾಲಗಳನ್ನು ತೀರಿಸಿಕೊಳ್ಳಲು ಅನುಕೂಲವಾಗುವಂತೆ ಅವರುಗಳಿಗೆ ಹಣವನ್ನು ಒದಗಿಸಲು ನಿಗದಿ ಮಾಡಿರತಕ್ಕ ಬಡ್ಡಿ ದರ ಮೊದಲಾದ ವಿಷಯಗಳಿಗೆ ಸಂಬಂಧಪಟ್ಟ ಷರತ್ತುಗಳೇನು?

ಉತ್ತರ.—ಮಾನ್ಯ ಶ್ರೀ ಎಚ್. ಸಿದ್ದಯ್ಯನವರು (ರೆವೆನ್ಯೂ ಮತ್ತು ಇಕ್ಸೈಜು ಸಚಿವರು).—

(a) ರೈತರ ಸಾಲದ ಹೊರೆಯನ್ನು ಇಳಿಸುವ ಉದ್ದೇಶದಿಂದ ಜಮೀನು ಅಡಮಾನದ ಬ್ಯಾಂಕುಗಳನ್ನೂ ಮತ್ತು ಸಾಲತೀರ್ವೆಯ ಬೋರ್ಡುಗಳನ್ನೂ ಏರ್ಪಡಿಸಲಾಗಿದೆ.

ಗ್ರಾಮಾಂತರ ಪ್ರದೇಶಗಳಲ್ಲಿ ಸಾಲ ತೀರ್ವೆಗಾಗಿ ಈ ಕೆಳಗೆ ಕಂಡ ಕಾರ್ಯಕ್ರಮಗಳೂ ಸಹ ಈಗ ಜಾರಿಯಲ್ಲವೆ:—

(i) ತಕಾವಿ ಮತ್ತು ಜಮೀನು ಅಬಾದಿನ ಸಾಲಗಳನ್ನು ಉದಾರವಾಗಿ ಕೊಡಲಾಗುತ್ತಿದೆ.

(ಮಾನ್ಯ ಶ್ರೀ ಎಚ್. ಸಿದ್ದಯ್ಯನವರು)

(ii) ಆಹಾರ ಧಾನ್ಯಗಳನ್ನು ಹೆಚ್ಚು ಪ್ರಮಾಣದಲ್ಲಿ ಬೆಳೆಯುವುದಕ್ಕೆ ಸಂಬಂಧಪಟ್ಟ ಯೋಜನೆಯ ಮೇರೆಗೆ ಗೊಬ್ಬರಕ್ಕಾಗಿ ಸಾಲಗಳನ್ನು ಕೊಡಲಾಗುತ್ತಿದೆ.

(iii) ಸಮಗ್ರಸೇವಾ ಪರಸ್ಪರ ಸಹಾಯ ಸಂಘಗಳ ಮೂಲಕ ವ್ಯವಸಾಯದ ಮುಟ್ಟುಗಳನ್ನೂ ಮತ್ತು ಬತ್ತನೆ ಬೀಜಗಳನ್ನೂ ನ್ಯಾಯವಾದ ಬೆಲೆಗೆ ಸರಬರಾಯಿ ಮಾಡಲಾಗುವುದು.

(iv) ಶೇಕಡ 2ರ ಬಡ್ಡಿದರದ ಮೇರೆ ನೀರಾವರಿ ಬಾವಿಗಳನ್ನು ತೋಡಿಸುವುದಕ್ಕೆ 'ಸಬ್ಸಿಡಿ' ಸಹಾಯ ದ್ರವ್ಯಗಳ ಸಾಲಗಳನ್ನೂ ಕೊಡಲಾಗುವುದು.

ವ್ಯವಸಾಯಕ್ಕೆ ಸಂಬಂಧಪಟ್ಟ ಕೆಲಸಗಳಿಗಾಗಿ ಬೇಕಾಗುವ ಹಣಕ್ಕಾಗಿ ರೈತರು ಸಾಲ ಮಾಡುವುದನ್ನು ತಪ್ಪಿಸುವುದೇ ಈ ಬಾಬುಗಳ ಉದ್ದೇಶವಾಗಿದೆ.

(b) ಈ ಕೆಳಗೆ ನಮೂದಿಸಿರುವ ಉದ್ದೇಶಗಳಿಗೆ ಮಾಮೂಲಾಗಿ ಕೊಟ್ಟಿರುವುದರ ಹೊರತು ಈ ಉದ್ದೇಶಕ್ಕಾಗಿ ಯಾವ ವಿಶೇಷರೀತಿಯ ಗ್ಯಾರಂಟಿಯನ್ನೂ ಒದಗಿಸಿಲ್ಲ.

ಬಡ್ಡಿಯ ದರಗಳನ್ನು, ಈ ಕೆಳಗೆ ನಮೂದಿಸಿರುವಂತೆ ವಿಧಾಯಕ ಮಾಡಲಾಗಿದೆ :—

ಜಮೀನು ಅಡಮಾನದ ಬ್ಯಾಂಕುಗಳು	ಶೇಕಡ $6\frac{1}{2}$
ಜಮೀನು ಆಬಾದು ಮತ್ತು ತಕಾವಿ ಸಾಲಗಳು	,, 4
'ಸಬ್ಸಿಡಿ' ಸಹಾಯ ದ್ರವ್ಯದ ಸಾಲಗಳು	,, 2
ವ್ಯವಸಾಯದ ಮುಟ್ಟುಗಳು ಮುಂತಾದುವನ್ನು ಸರಬರಾಯಿ ಮಾಡುವುದು	ಬಡ್ಡಿ ಇಲ್ಲ

ಕಳೆದ ಮೂರು ವರ್ಷಗಳಿಂದಲೂ ನಾನಾ ಬಾಬುಗಳಿಗೆ ಕೊಟ್ಟಿರತಕ್ಕ ಪೊಬಲಗುಗಳು ಈ ಕೆಳಗೆ ನಮೂದಿಸಿರುವಂತಿವೆ ;—

(i) 1950-51, 1949-50 ಮತ್ತು 1948-49ನೆಯ ಸಾಲುಗಳಲ್ಲಿ ಕೊಡಲಾಗಿರುವ ತಕಾವಿ ಮತ್ತು ವ್ಯವಸಾಯದ ಸಾಲಗಳ ಬಾಬತು ಪೊಬಲಗುಗಳು :—

	ರೂಪಾಯಿಗಳು.		
ಪೊಬಲಗು	3,75,000	1950-51ನೆಯ	ಸಾಲಗೆ
,,	1,75,000	1949-50	,,
,,	3,25,000	1948-49	,,

(ii) 1950-51, 1949-50, 1948-49ನೆಯ ಸಾಲುಗಳಲ್ಲಿ ಹೊಸ ನಿಬಂಧನೆಗಳ ಮೇರೆಗೆ ಕೊಡಲಾಗಿರುವ ಜಮೀನು ಆಬಾದಿನ ಮತ್ತು ವ್ಯವಸಾಯದ ಸಾಲಗಳ ಬಾಬತು ಪೊಬಲಗುಗಳು.—

	ರೂಪಾಯಿಗಳು		
ಪೊಬಲಗು	2,75,000	1950-51ನೆಯ	ಸಾಲು
,,	1,75,000	1949-50	,,
,,	3,25,000	1948-49	,,

(iii) ನೀರಾವರಿ ಬಾವಿಗಳನ್ನು ತೋಡಿಸಲು ಯುದ್ಧಾನಂತರದ ಅಭಿವೃದ್ಧಿಯ ಆರು ಯೋಜನೆಗಳ ಮೇರೆಗೆ 'ಸಬ್ಸಿಡಿ' ಸಹಾಯ ದ್ರವ್ಯವನ್ನು ಕೊಟ್ಟಿರುವುದು:—

	ರೂಪಾಯಿಗಳು		
ಪೊಬಲಗು	10,00,000	1950-51ನೆಯ	ಸಾಲು
,,	5,00,000	1949-50	,,
,,	9,00,000	1948-49	,,

ಶ್ರೀ ಬಿ. ಚನ್ನಬೈರೇಗೌಡರು.— ರೈತರು ತಮ್ಮ ಸಾಲಗಳನ್ನು ತೀರಿಸಲು ಅವರಿಗೆ ಕೊಡತಕ್ಕ ಸಾಲದ ಮೇಲೆ ಹಾಕುವ ಬಡ್ಡಿದರವೆಷ್ಟೆಂದು ಕೇಳಿದ್ದೇನೆ, ಅದನ್ನು ತಿಳಿಸಿಲ್ಲ, ಅದನ್ನು ತಿಳಿಸಲು ಆಗುವುದಿಲ್ಲವೆ?

*ಮಾನ್ಯ ಶ್ರೀ ಎಚ್ ಸಿದ್ದಯ್ಯನವರು.—ಅದನ್ನು ತಿಳಿಸಿದೆ, ತಾವು ಉತ್ತರವನ್ನು ಪೂರ್ತಿಯಾಗಿ ನೋಡಿ. 4ನೆಯ ಪುಟದಲ್ಲಿ (ಬ) ಭಾಗಕ್ಕೆ ಕೊಟ್ಟಿರುವ ಉತ್ತರವನ್ನು ನೋಡಿ.

ಶ್ರೀ ಬಿ. ಚನ್ನಬೈರೇಗೌಡರು.— ಹೌದು, ಇಲ್ಲಿ ಕೊಟ್ಟಿದೆ.

ಶ್ರೀ ಬಿ. ಹುಚ್ಚೇಗೌಡರು (ತುಮಕೂರು ಜಿಲ್ಲೆ).— ಈಗ ಸರ್ಕಾರದವರು ಕೊಟ್ಟಿರುವ ಹಣದಿಂದ ರೈತರ ಸಾಲ ಬೇಗ ಹರಿಯುತ್ತದೆಂದು ಸರ್ಕಾರದವರ ಭಾವನೆಯೆ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಆದಷ್ಟು ಬೇಗ ಅವರ ಋಣ ಪರಿಹಾರವಾಗಬೇಕೆಂಬ ಉದ್ದೇಶದಿಂದ ಇಷ್ಟು ಅನುಕೂಲ ಮಾಡಲಾಗಿದೆ.

ಶ್ರೀ ಬಿ. ಹುಚ್ಚೇಗೌಡರು.—ಪರಿಹಾರವಲ್ಲ, ಅವರಿಗಿರುವ ಸಾಲಗಳನ್ನು ತೀರಿಸಲು ಏನು ಏರ್ಪಾಡು ಮಾಡಿದ್ದೀರಿ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಅದನ್ನು ಲೆಕ್ಕ ಹಾಕಿದರೆ ಕೋಟ್ಯಾಂತರ ರೂಪಾಯಿ ಆಗುತ್ತದೆ, ಅದು ದೊಡ್ಡ ಪ್ರಶ್ನೆ, ಅದಕ್ಕೆ ಬೇರೆ ಯೋಚನೆ ಮಾಡಿದೆ.

ಶ್ರೀ ಬಿ. ಹುಚ್ಚೇಗೌಡರು.— ಇದನ್ನು ಯಾವಾಗ ಮಾಡುವುದಕ್ಕೆ ಸಾಧ್ಯ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.— ಇದೇ ಮೂಲಕ ಸಾಧ್ಯವಾದಷ್ಟು ಮಾಡಬೇಕೆಂದು ಉದ್ದೇಶ.

ಶ್ರೀ ಬಿ. ಹುಚ್ಚೇಗೌಡರು.—ರೈತರಿಗೆ ಸುಮಾರು 35 ಕೋಟಿ ರೂಪಾಯಿನ ಮೇಲೆ ಸಾಲವಿದೆ ಎಂದರೆ ಒಪ್ಪುತ್ತೀರಾ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಅದು ಒಂದಾನೊಂದು ಕಾಲದ ಲೆಕ್ಕ.

ಶ್ರೀ ಬಿ. ಹುಚ್ಚೇಗೌಡರು.— ಈಗ ಕಡಿಮೆಯಾಗಿದೆಯೆ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಹೇಳುವುದಕ್ಕಾಗುವುದಿಲ್ಲ, ತನಿಖೆ ನಡೆಸದೆ ಈಗ ಹೇಗೆ ಹೇಳುವುದು?

ಶ್ರೀ ಬಿ. ಹುಚ್ಚೇಗೌಡರು.—ರೈತರಿಗೆ ಎಷ್ಟು ಸಾಲವಿದೆಯೋ ಅದನ್ನು ತೀರಿಸುವುದಕ್ಕೆ ಸರ್ಕಾರದವರು ಏನು ಕಾರ್ಯಕ್ರಮ ತೆಗೆದುಕೊಂಡಿದ್ದಾರೆ?

ಮಾನ ಶ್ರೀ ಎಚ್. ಸಿದ್ದಯ್ಯನವರು.—ತಾವು ಹೇಳುವುದು 1945ನೆಯ ಇನವಿಯ ಲೆಕ್ಕ, ಈಚೆಗೆ ವಿವರವಾಗಿ ಲೆಕ್ಕ ಮಾಡಿಲ್ಲ. ಆದುದರಿಂದ ಈಗ ಊಹೆಯಿಂದ ಹೇಳಲು ಇಚ್ಛೆಪಡುವುದಿಲ್ಲ.

ಶ್ರೀ ಬಿ. ಹುಚ್ಚೇಗೌಡರು.— ಅವರ ಸಾಲವನ್ನು ತೀರಿಸುವುದಕ್ಕೆ ಏನಾದರೂ ಏರ್ಪಾಡು ಮಾಡಬೇಕೆಂಬ ಉದ್ದೇಶವಿದೆಯೆ!

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.— ಈ ರೀತಿಯ ಮಾರ್ಗಗಳಿಂದ ತಕ್ಕಷ್ಟು ಆಗುತ್ತದೆ.

ಶ್ರೀ ಬಿ. ಹುಚ್ಚೇಗೌಡರು.—ಇದರಿಂದ ಕೋಟ್ಯಾಂತರ ರೂಪಾಯಿ ತೀರಿಸಲಾಗುವುದಿಲ್ಲವೆಂಬುದು ಗೊತ್ತಿದೆಯೆ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಇದೆಲ್ಲವನ್ನು ಸೇರಿಸಿದರೆ, ಒಂದು ಕೋಟಿ ರೂಪಾಯಿನ ಮೇಲಾಗುತ್ತದೆ.

* Speeches asterisked have not been revised by the Hon'ble Members concerned.

ಶ್ರೀ ಬಿ. ಹುಚ್ಚೇಗೌಡರು.—ತಾವು ಕೊಟ್ಟಿರುವುದನ್ನು ಲೆಕ್ಕಹಾಕಿ ನೋಡಿದರೆ 20 ಲಕ್ಷ ರೂಪಾಯಿ ಕೂಡ ಆಗುವುದಿಲ್ಲವಲ್ಲ!

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಉದಾಹರಣೆಗೆ ಲ್ಯಾಂಡ್ ಮಾರ್ಟ್‌ಗೇಜ್ ಬ್ಯಾಂಕಿನಿಂದ ಕೊಟ್ಟಿರುವ ಸಾಲವೇ 75 ಲಕ್ಷ ರೂಪಾಯಿನ ಮೇಲಾಗುತ್ತದೆ, ಇಲ್ಲವೆಂದು ಹೇಳುವುದು ನಿಜಾಂಶವಲ್ಲ.

ಶ್ರೀ ಬಿ. ಹುಚ್ಚೇಗೌಡರು.—ಕೋಜ್ಯಾಂತರ ರೂಪಾಯಿ ಆಗುತ್ತದೆಯೆ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಎಲ್ಲವನ್ನೂ ಸೇರಿಸಿದರೆ ಒಂದು ಕೋಟಿಯ ಮೇಲಾಗುತ್ತದೆಂದು ಹೇಳಿದೆ.

ಶ್ರೀ ಬಿ. ಹುಚ್ಚೇಗೌಡರು.—ತಕಾವಿ ಸಾಲವನ್ನು ಹೊರದಪರ್ಷ 3,75,00 ರೂಪಾಯಿ ಕೊಟ್ಟಿದೆ, ಆಚೆ ವರ್ಷ 1 ಲಕ್ಷ 75 ಸಾವಿರ ಕೊಟ್ಟಿದೆ, ದೇಶದಲ್ಲಿ ಲಕ್ಷಾಂತರ ಜನ ವ್ಯವಸಾಯಗಾರರಿದ್ದಾರೆ, ಒಬ್ಬೊಬ್ಬರಿಗೆ ಒಂದೊಂದು ರೂಪಾಯಿ token ಆಗಿ ಕೂಡ ಬರುವುದಿಲ್ಲವಲ್ಲವೆ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಸರ್ಕಾರದವರು ಸಾಧ್ಯವಾದಷ್ಟು ಓದಗಿಸಿದ್ದಾರೆ, ಇದಕ್ಕಿಂತ ಹೆಚ್ಚು ಮಾಡಲು ಈಗ ಸಾಧ್ಯವಿಲ್ಲ.

ಶ್ರೀ ಬಿ. ಹುಚ್ಚೇಗೌಡರು.—ಒಬ್ಬೊಬ್ಬರಿಗೆ ಒಂದೊಂದು ರೂಪಾಯಿಯಾದರೂ ಬರುವಂತೆ 12ಲಕ್ಷ ರೂಪಾಯಿಗಳನ್ನಾದರೂ ಕೊಡುವುದಕ್ಕೆ ಸಾಧ್ಯವಿಲ್ಲವೇ!

ಅಧ್ಯಕ್ಷರು.—ಒಂದೊಂದು ರೂಪಾಯಿ ಕೊಟ್ಟರೆ ಏನು ಪ್ರಯೋಜನ?

ಒಬ್ಬ ಸದಸ್ಯರು.—ತಮಾಷೆಗೆ ಹೇಳುತ್ತಿದ್ದಾರೆಂದು ಕಾಣುತ್ತೆ?

ಶ್ರೀ ಬಿ. ಹುಚ್ಚೇಗೌಡರು.—ನೀರಾವರಿ ಬಾವಿಗಳನ್ನು ತೋಡಿಸುವುದಕ್ಕೆ 10 ಲಕ್ಷ ರೂಪಾಯಿಗಳನ್ನು ಕೊಟ್ಟಿದೆಯೆಂದು ಹೇಳಿದ್ದೀರಿ. ಈ ಹತ್ತು ಲಕ್ಷ ರೂಪಾಯಿಗಳೂ ಖರ್ಚಾಗಿದೆಯೇ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಲೆಕ್ಕ ನೋಡಬೇಕು.

ಶ್ರೀ ಬಿ. ಹುಚ್ಚೇಗೌಡರು.—1950-51ನೆಯ ಸಾಲಿನಲ್ಲಿ ಈ ಹಣದಿಂದ 351 ಬಾವಿಗಳನ್ನು ತೋಡಿಸಲಾಗಿದೆಯೆಂದು ಹೇಳಿದ್ದೀರಿ. ಹಾಗಾದರೆ 10 ಲಕ್ಷ ರೂಪಾಯಿಗಳೂ ಖರ್ಚಾಗಿವೆಯೇ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ನೋಟೀಸ್ ಬೇಕು.

ಶ್ರೀ ಬಿ. ಹುಚ್ಚೇಗೌಡರು.—ಹೊಸದಾಗಿ ಅರ್ಜಿಗಳನ್ನು ತೆಗೆದುಕೊಂಡು ಇನ್ನೂ ಹೆಚ್ಚು ಹೆಚ್ಚಾಗಿ ಕೊಡುವುದಕ್ಕೆ ಏರ್ಪಾಡುಮಾಡುತ್ತೀರಾ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಕೇಳುವುದಕ್ಕೇ ಅನೇಕರು ಬಂದಿಲ್ಲ. ಹೆಚ್ಚಾಗಿ ಪ್ರಚಾರ ಕಾರ್ಯ ನಡೆಸಿ ಹೆಚ್ಚು ಹೆಚ್ಚು ಬಾವಿ ತೋಡಿಸಿ ಎಂದು ನಾವು ಹೇಳುತ್ತಿದ್ದೇವೆ.

ಶ್ರೀ ಬಿ. ಹುಚ್ಚೇಗೌಡರು.—ತಾವು ಕೊಡತಕ್ಕ ಹಣ ಸಾಲದೆಂದು ಹೇಳಿ ಸಾಲದ ರೂಪವಾಗಿಯಾದರೂ ಹಣ ಕೊಡಿಯೆಂದು ಅರ್ಜಿಗಳು ಬಂದಿಲ್ಲವೇ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಈಗಲೂ 500 ರೂಪಾಯಿ ಸಬ್ಸಿಡಿಯಲ್ಲದೆ 500 ರೂಪಾಯಿ ಸಾಲಕೊಡುತ್ತಿದ್ದೇವೆ?

ಶ್ರೀ ಬಿ. ಹುಚ್ಚೇಗೌಡರು.—ಅದೂ ಸಾಲುವುದಿಲ್ಲ. ಕೆಲವಕ್ಕೆ 5,000 ರೂಪಾಯಿಗಳವರೆಗೂ ಖರ್ಚಾಗುತ್ತದೆ.

ಅಧ್ಯಕ್ಷರು.—ಇಲ್ಲಿ ಪ್ರಶ್ನೆಯಿರುವುದು ರೈತರಿಗಿರುವ ಸಾಲ ತೀರಿಸುವುದಕ್ಕೆ ಏನೇನು ಕಾರ್ಯಕ್ರಮ ಕೈಕೊಂಡಿದ್ದಾರೆಂಬುದು. ನೀವು ಬಾವಿಗಳಿಗೆ ಇನ್ನೂ ಹೆಚ್ಚಿಗೆ ಕೊಡಬೇಕೆಂದು ಕೇಳುತ್ತಾ ಹೋದರೆ ಹೇಗೆ!!

ಶ್ರೀ ಬಿ. ಹುಚ್ಚೇಗೌಡರು.—ಇಲ್ಲಿ ಉತ್ತರದಲ್ಲಿ ನೀರಾವರೀ ಬಾವಿಗಳಿಗೆ ಎಷ್ಟು ಕೊಡುತ್ತಿದೆಯೆಂದು ಹೇಳಿದೆ. ಅದು ಸಾಲದೆಂದು ನಾನು ಕೇಳುತ್ತಿದ್ದೇನೆ.

ಅಧ್ಯಕ್ಷರು.—ಮೂಲ ಪ್ರಶ್ನೆಯೇನೆಂಬುದನ್ನು ನೋಡಿಕೊಂಡು ಅದಕ್ಕೆ ತಕ್ಕಂತೆ ಉಪಪ್ರಶ್ನೆ ಕೇಳಿದರೆ ಉತ್ತಮವೆಂದು ತೋರುತ್ತೆ.

ಶ್ರೀ ಬಿ. ಹುಚ್ಚೇಗೌಡರು.—ಬಾವಿ ತೋಡಲು 500 ರೂಪಾಯಿಗಳನ್ನು ಮಾತ್ರ ಕೊಡುತ್ತಿದ್ದಾರೆ. ಅದರೆ 5,000 ರೂಪಾಯಿಗಳವರೆಗೂ ಖರ್ಚಾಗುತ್ತಿದೆ. ಆದ್ದರಿಂದ ಹೆಚ್ಚಿಗೆ ಕೊಡಬೇಕೆಂದು ಕೇಳುತ್ತಿದ್ದೇನೆ.

ಅಧ್ಯಕ್ಷರು.—ಇದರ ಮೇಲೆ ಚರ್ಚೆ ಬೇಕಾಗಿಲ್ಲ.

ಶ್ರೀ ಬಿ. ಹುಚ್ಚೇಗೌಡರು.—ಜಮೀನು ಅಡಮಾನದ ಬ್ಯಾಂಕಿನ ಮೂಲಕವಾಗಿಯಾದರೂ ವರ್ಷಕ್ಕೆ ಒಂದು ಕೋಟಿ ರೂಪಾಯಿಗಳನ್ನಾದರೂ ಕೊಡುವುದಕ್ಕೆ ಏರ್ಪಾಡುಮಾಡುತ್ತೀರಾ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಒಂದು ಕೋಟಿ ರೂಪಾಯಿಗಳನ್ನು ಕೊಡುವುದು ಕಷ್ಟ. ಆದಷ್ಟು ಮಟ್ಟಿಗೆ ಹೆಚ್ಚಿಗೆ ಕೊಡುತ್ತೇವೆ. ಈಗಲೂ ಕಳೆದ 2-3 ವರ್ಷಗಳಿಂದ ಹೆಚ್ಚು ಹೆಚ್ಚು ಕೊಡುತ್ತಿದೆ.

ಶ್ರೀ ಎಸ್. ರಂಗರಾಮಯ್ಯನವರು (ಮೈಸೂರು ಜಿಲ್ಲೆ).—ಜಮೀನು ಅಡಮಾನ ಬ್ಯಾಂಕಿಗೆ ಎಷ್ಟು ಅರ್ಜಿ ಬಂದಿತ್ತು. ವರ್ಷಕ್ಕೆ ಎಷ್ಟು ಕೊಟ್ಟಿದೆಯೆಂಬುದನ್ನು ಹೇಳುತ್ತೀರಾ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ನೋಟೀಸ್ ಬೇಕು.

ಶ್ರೀ ಎಸ್. ರಂಗರಾಮಯ್ಯನವರು.—ಡೆಪ್ಯೂಟಿ ಕಮಿಷನರ್ ಬೋರ್ಡಿನವರಿಗೆ ಎಷ್ಟು ಕೇಸುಗಳು ಬಂದಿತ್ತು, ಎಷ್ಟು ಇತ್ಯರ್ಥವಾಯಿತು, ಸಾಲದ ಪೊಬಲಗನ್ನು ಎಷ್ಟು ಕಡಿಮೆಮಾಡಲಾಯಿತೆಂಬುದನ್ನು ಹೇಳುತ್ತೀರಾ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ನೋಟೀಸ್ ಬೇಕು.

ಶ್ರೀ ಎಸ್. ರಂಗರಾಮಯ್ಯನವರು.—ಇವೆರಡರಿಂದಲೇ ಸಂಸ್ಥಾನದ ಜನಗಳೆಲ್ಲರ ಸಾಲ ತೀರ್ವೆಯಾಗುವುದಿಲ್ಲವೆಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಈ ಎರಡರಿಂದಲೇ ಸಾಲ ತೀರುವುದಿಲ್ಲವೆಂಬುದನ್ನು ಒಪ್ಪುತ್ತೇನೆ.

ಶ್ರೀ ಎಸ್. ರಂಗರಾಮಯ್ಯನವರು.—ಮದ್ರಾಸಿನಲ್ಲಿ ಕಾಂಗ್ರೆಸ್ ಸರ್ಕಾರ ಬಂದ ಕೂಡಲೆ Scaling down debt ಕಾನೂನನ್ನು ಜಾರಿಗೆ ತಂದಿರುವುದು ತಮ್ಮ ಗಮನಕ್ಕೆ ಬಂದಿದೆಯೇ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು—ಪತ್ರಿಕೆಗಳಲ್ಲಿ ಓದಿದ್ದೇನೆ.

ಶ್ರೀ ಎಸ್. ರಂಗರಾಮಯ್ಯನವರು.—ಋಣ ಪರಿಹಾರವಾಗುವುದಕ್ಕೆ ಈಗಿರುವ ಕಾನೂನುಗಳ ಜೊತೆಗೆ ಅದು ಮುಖ್ಯವಾಗಿ ಸಹಾಯವಾಡುತ್ತದೆಂಬುದನ್ನು ತಾವು ಒಪ್ಪುತ್ತೀರಾ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.— ನಮ್ಮಲ್ಲೂ ಅಗ್ರಿಕಲ್ಚರಲ್ ರಿಲೀಫ್ ಆಕ್ಟ್ ಮುಂತಾದುವು ಇವೆ.

ಶ್ರೀ ಎಸ್. ರಂಗರಾಮಯ್ಯನವರು.— ಇವೆಲ್ಲಕ್ಕಿಂತಲೂ scaling down debt ಕಾನೂನಿನಿಂದ ಹೆಚ್ಚಿಗೆ ಋಣ ಪರಿಹಾರವಾಗುತ್ತದೆಂಬುದನ್ನು ಯೋಚನೆ ಮಾಡಿದ್ದೀರಾ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.— ಮಾನ್ಯ ಸದಸ್ಯರ ಸಲಹೆಗಳನ್ನು ಯೋಚನೆಮಾಡುತ್ತೇವೆ.

ಶ್ರೀ ಎಸ್. ರಂಗರಾಮಯ್ಯನವರು.— ಮುಂದಿನ ಸಾರಿಯಾದರೂ ಇದಕ್ಕೆ ಸಂಬಂಧಪಟ್ಟಹಾಗೆ ಒಂದು ಬಿಲ್ಲನ್ನು ತರುವುದನ್ನು ಯೋಚನೆಮಾಡುತ್ತೀರಾ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.— ಯೋಚನೆ ಮಾಡುತ್ತೇವೆ.

Sri H. C. LINGA REDDY (Kolar District—General)—Have the Government surveyed the agricultural indebtedness of the raiyats in the State? If so, when?

The Hon'ble Sri H. SIDDAIYA.—Yes, some five years back.

Sri H. C. LINGA REDDY.—What is the extent of indebtedness?

The Hon'ble Sri H. SIDDAIYA.—About Rs. 35 crores.

Sri H. C. LINGA REDDY.—Do not the Government consider that some sort of agricultural moratorium should be introduced in the State?

The Hon'ble Sri H. SIDDAIYA.—That was once under consideration. That will be taken up again.

ಶ್ರೀ ಟಿಎಚ್. ಸಿದ್ದವೀರಪ್ಪನವರು (ಚಿತ್ರದುರ್ಗ ಜಿಲ್ಲೆ).— ಈಗ ಪುನಃ ಸರ್ವೆ ನಡೆಸಲಕ್ಕೇನಾದರೂ ಏರ್ಪಾಡುಮಾಡುತ್ತೀರಾ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.— ಅದನ್ನು ಯೋಚನೆಮಾಡಬೇಕು.

ಶ್ರೀ ಎಚ್. ಸಿದ್ದವೀರಪ್ಪನವರು.— ಈಗಿರುವ ಪ್ರಕಾರ secured creditors ಮೇಲೆ ಈ ಪಂಚಾಯ್ತಿ ತೀರ್ಮಾನಗಳು ಎಷ್ಟು ಮಾತ್ರವೂ ಬಂಧಿಸುವುದಿಲ್ಲವೆಂದು ಕಾನೂನಿನಲ್ಲರುವುದರಿಂದ, ಈ ಡೆಟ್ ಕನ್ಸಿಲಿಯೇಷನ್ ಬೋರ್ಡುಗಳಿಂದ ಕೆಲಸಗಳು ಸರಿಯಾಗಿ ನಡೆಯುತ್ತಿಲ್ಲವೆಂಬುದು ತಮ್ಮ ಗಮನಕ್ಕೆಬಂದಿದೆಯೇ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು — ಈ ಆಕ್ಟಿನಲ್ಲಿ ಕೆಲವು ನ್ಯೂನತೆಗಳಿರುವುದು ಸರ್ಕಾರದವರ ಗಮನಕ್ಕೆ ಬಂದಿದೆ.

ಶ್ರೀ ಎಚ್. ಸಿದ್ದವೀರಪ್ಪನವರು.— ಹಾಗಾದರೆ ಈ ಕಾನೂನನ್ನು ತಿದ್ದುಪಡಿಮಾಡುವುದಕ್ಕೇನಾದರೂ ಸರ್ಕಾರದವರು ಕಾರ್ಯಕ್ರಮ ಕೈಕೊಂಡಿದ್ದೀರಾ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.— ಅವಕ್ಕೆ ಇನ್ನೂ ಹೆಚ್ಚಿನ ಅಧಿಕಾರಗಳನ್ನು ಕೊಡುವಂತೆ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂದು ಅರಿಕೆಗಳು ಬಂದಿವೆ.

ಶ್ರೀ ಎಚ್. ಸಿದ್ದವೀರಪ್ಪನವರು.— ಇಲ್ಲಿ Six Post-war Development Schemes ಪ್ರಕಾರ ಬಾವಿಗಳನ್ನು ತೋಡಿಸಲಕ್ಕೆ ಸಬ್ಸಿಡಿ ಕೊಟ್ಟಿರುವುದನ್ನು ತಿಳಿಸಿದೆ. ಇದೇನು ಬಡ್ಡೆಟ್ಟಿನಲ್ಲಿ ಓದಗಿಸಿರುವ ಹಣವೇ ಆಥವಾ ಖರ್ಚಾದ ಮೊಬಲಗೇ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.— ಅಷ್ಟೂ ಖರ್ಚಾಗಿ, ಹೋದ ವರ್ಷ 50–51ಕ್ಕೆ ಇನ್ನೂ ಎಷ್ಟೋ ಹೆಚ್ಚಾಗಿ ಕೊಟ್ಟಿದೆ.

ಶ್ರೀ ಡಿ. ಎಂ. ಸಿದ್ದಯ್ಯನವರು (ಮೈಸೂರು ಜಿಲ್ಲೆ).— ಹಳ್ಳಿಗಾಡಿನ ರೈತರಲ್ಲಿ ಈಗ 1950–51ಕ್ಕೆ ಸಾಲ ಶೇಕಡ ಎಷ್ಟು ಉಳಿದಿದೆ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.— ನೋಟೀಸ್ ಬೇಕು.

ಶ್ರೀ ಡಿ. ಎಂ. ಸಿದ್ದಯ್ಯನವರು.— ಈ ಸಾಲವನ್ನು ಪರಿಹಾರಮಾಡುವುದರಲ್ಲಿ ಈ ಕಾನೂನಿನಿಂದ ಸಾಕಾದಷ್ಟು ಪ್ರಯೋಜನವಾಗಿಲ್ಲವೆಂಬುದನ್ನು ಒಪ್ಪುತ್ತೀರಾ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.— ಅದನ್ನು ಒಪ್ಪಿಕೊಂಡಿದ್ದೇವೆ.

ಶ್ರೀ ಡಿ. ಎಂ. ಸಿದ್ದಯ್ಯನವರು.— ಈಗಿರತಕ್ಕ ವಿಧಾನಗಳಿಂದ ಅವರಿಗೆ ಸಾಲ ದೊರೆಯುವುದು ನಿಧಾನವಾಗಿ ಏನೂ ಪ್ರಯೋಜನವಾಗಿಲ್ಲವೆಂಬುದನ್ನು ಒಪ್ಪುತ್ತೀರಾ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.— ಓದಗಿಸಿರ ತಕ್ಕ ಹಣ ಬೇಗನೆ ಖರ್ಚು ಬೀಳುತ್ತಿಲ್ಲ.

ಶ್ರೀ ಡಿ. ಎಂ. ಸಿದ್ದಯ್ಯನವರು.— ಇನ್ನೂ ಇಷ್ಟು ಹೆಚ್ಚಿಗೆ ಸಾಲ ಇರುವುದರಿಂದ ಯಾವುದಾದರೂ ಯೋಜನೆಹಾಕಿ ಇಷ್ಟು ವರ್ಷಗಳಲ್ಲಿ ಸಾಲ ತೀರಿಸಬೇಕು ಎಂದು ಏನಾದರೂ ಏರ್ಪಾಡುಮಾಡುತ್ತೀರಾ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.— ಯೋಚನೆ ಮಾಡಬೇಕು.

ಶ್ರೀ ಡಿ. ಎಂ. ಸಿದ್ದಯ್ಯನವರು.— ಸಾಧ್ಯವಾದಷ್ಟು ಬೇಗನೆ ಯೋಚನೆಮಾಡಿ ಹಳ್ಳಿಗಾಡಿನ ಜನರ ಸಾಲ ತೀರ್ವೆಗೇನಾದರೂ ನೀವು ಕಾರ್ಯಕ್ರಮ ಕೈಕೊಳ್ಳುತ್ತೀರಾ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.— ಯೋಚನೆ ಮಾಡುತ್ತೇವೆ.

Mr. SPEAKER.—Next question No. 233. Sri M. Hanumanthiah.

Grant of Lands to Depressed Classes under Grow More Food Scheme.

*ಪ್ರಶ್ನೆ 233.— ಲೋಕಾಪೇಕ್ಷಾನಿರತ ಶ್ರೀ ಎಂ. ಹನುಮಂತಯ್ಯನವರು (ಬೆಂಗಳೂರು ಡಿಸ್ಟ್ರಿಕ್ಟು—ನಿಮ್ನ ಪಂಗಡ).—

ಈ ಕೆಳಗೆ ಕೇಳಿರುವ ಸಂಗತಿಗಳನ್ನು ಸರ್ಕಾರದವರು ದಯೆಯಿಟ್ಟು ತಿಳಿಸಬೇಕೆಂದು ಪ್ರಾರ್ಥನೆ).—

(a) ಹೆಚ್ಚಿಗೆ ಆಹಾರಧಾನ್ಯಗಳನ್ನು ಬೆಳೆಯುವ ಯೋಜನೆಯ ಸಂಬಂಧದಲ್ಲಿ ಇದುವರೆಗೆ ಎಷ್ಟು ಎಕರೆ ಜಮೀನನ್ನು ಕೊಡಲಾಗಿದೆ;

(b) ಇದರ ಪೈಕಿ ನಿಮ್ನ ತರಗತಿಗಳವರಿಗೆ ಎಷ್ಟು ಎಕರೆ ಜಮೀನುಗಳನ್ನು ಕೊಡಲಾಗಿದೆ;

(c) ನಿಮ್ನ ತರಗತಿಗಳವರಿಗೆ ಕೊಟ್ಟ ಜಮೀನಿನ ಪೈಕಿ, ಅವರಿಗೆ ಜಮೀನು ಕೊಡಲು ಬಂದ ಆಕ್ಷೇಪಣೆಗಳ ಫಲತಾಂಶವಾಗಿ, ಎಷ್ಟು ಎಕರೆ ಜಮೀನಿನ ಮಂಜೂರಾತಿಯನ್ನು ರದ್ದುಮಾಡಲಾಯಿತು:

(d) ಈ ರೀತಿ ರದ್ದುಮಾಡಲಾದ ಜಮೀನುಗಳ ಸಂಬಂಧದಲ್ಲಿ ಡೆಪ್ಯುಟಿ ಕಮೀಷನರವರ ಕೋರ್ಟಿನಲ್ಲಿಯೂ ರೆವೆನ್ಯೂ ಕಮೀಷನರವರ ಕೋರ್ಟಿನಲ್ಲಿಯೂ, ಮತ್ತು

ಸರ್ಕಾರದಲ್ಲಿಯೂ ದಾಖಲಾದ ಅಪೀಲುಗಳ ಸಂಖ್ಯೆ ಎಷ್ಟು ;

(e) ಇವುಗಳ ಪೈಕಿ ಎಷ್ಟು ಅಪೀಲುಗಳನ್ನು ಇತ್ಯರ್ಥಪಡಿಸಲಾಯಿತು ?

ಉತ್ತರ.—ಮಾನ್ಯ ಶ್ರೀ ಎಚ್. ಸಿದ್ದಯ್ಯನವರು (ರೆವೆನ್ಯೂ ಮತ್ತು ಎಕ್ಸೈಜು ಶಾಖೆಗಳ ನಚಿವರು).—

(a) ಈ ಯೋಜನೆಯು ಪ್ರಾರಂಭವಾದಂದಿನಿಂದ 1950ನೆಯ ಇಸವಿ ಅಗಸ್ಟ್ ತಿಂಗಳವರೆಗೆ 3,14,882 ಎಕರೆಗಳನ್ನು ಕೊಡಲಾಗಿದೆ.

(b) ಹೆಚ್ಚಿಗೆ ಆಹಾರಧಾನ್ಯಗಳನ್ನು ಬೆಳೆಯುವ ಯೋಜನೆಯ ಸಂಬಂಧದಲ್ಲಿ ನಿಮ್ಮ ತರಗತಿಗಳವರಿಗೆ ಜಮೀನುಗಳನ್ನು ಮಂಜೂರು ಮಾಡುವ ವಿಷಯದಲ್ಲಿ ಪ್ರತ್ಯೇಕವಾಗಿ ಯಾವ ರಿಜಿಸ್ಟರನ್ನೂ ಇಟ್ಟಿಲ್ಲ.

(c), (d) ಮತ್ತು (e) ಈ ವಿವರಗಳು ಸಿದ್ಧವಾಗಿ ದೊರೆಯುವಂತಿಲ್ಲ.

ಶ್ರೀ ಎಂ. ಹನುಮಂತಯ್ಯನವರು.—ಪ್ರತ್ಯೇಕವಾದ ರಿಜಿಸ್ಟರ್ ಇಟ್ಟಿಲ್ಲವೆಂದು ಹೇಳಿದ್ದೀರಿ. ಹಾಗಿದ್ದಮೇಲೆ ಈ ಅರ್ಜಿದಾರರಲ್ಲಿ ಬಡವರು ಯಾರು, ಜಮೀನ್ದಾರರು ಯಾರು ಜಮೀನಿಲ್ಲದವರು ಯಾರು ಎಂಬುದನ್ನೆಲ್ಲಾ ತಿಳಿಸುವ ವಿವರಗಳ ಪಟ್ಟಿಯಿಲ್ಲವೇ ?

*ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ನಿಮ್ಮ ತರಗತಿಯವರಿಗೆ ಸಂಬಂಧಪಟ್ಟ ಹಾಗೆ ಜಮೀನುಗಳನ್ನು ಕೊಡತಕ್ಕ ಬಾಬುಗಳು ಬೇರೆ ಇವೆ. ಹೆಚ್ಚು ಆಹಾರ ಬೆಳೆಯುವ ಯೋಜನೆಯ ಪ್ರಕಾರ ಕೊಡುವುದರಲ್ಲಿ ಆ ರೀತಿ ವಿಂಗಡಿಸುವುದಿಲ್ಲ.

ಶ್ರೀ ಎಂ. ಹನುಮಂತಯ್ಯನವರು.—ಈ ಯೋಜನೆಯ ಪ್ರಕಾರ ಅವರಿಗೂ ಏನಾದರೂ ಕೊಟ್ಟಿದ್ದೀರಾ ;

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಈಗ ಕೊಟ್ಟಿರುವುದರಲ್ಲಿ ಅವರದೂ ಸೇರಿಕೊಂಡಿದೆ.

ಶ್ರೀ ಎಂ. ಹನುಮಂತಯ್ಯನವರು.—ಇಲ್ಲಿ (d) ಪ್ರಶ್ನೆಗೆ ಉತ್ತರವಾಗಿ, ಅಂಕಿ ಅಂಶಗಳು ಬೇಗ ದೊರೆಯುವಂತಿಲ್ಲ ಎಂದು ಹೇಳಿರುವುದಕ್ಕೆ ಕಾರಣವೇನು ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಇಂಥಿಂಥಾ ಕೋರ್ಟಿನಲ್ಲಿ ಇಷ್ಟಿಷ್ಟು ಕೇಸು ಬಂದಿವೆಯೆಂಬುದನ್ನು ಹೇಳುವುದಕ್ಕೆ ಕಾಲಾವಕಾಶ ಸಾಲಲಿಲ್ಲ. ಆದ್ದರಿಂದ ಹೇಳುವುದಕ್ಕಾಗಿಲ್ಲ.

ಶ್ರೀ ಎಂ. ಹನುಮಂತಯ್ಯನವರು —ಹಾಗಿದ್ದಮೇಲೆ ಅವರ ಕಷ್ಟವನ್ನು ಸರ್ಕಾರದವರಿಗೆ ತಿಳಿಸಬಹುದೇ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ತಿಳಿಸಬಹುದು.

ಶ್ರೀ ಡಿ. ಗೋವಿಂದದಾಸ್‌ರವರು (ಹಾಸನ ಜಿಲ್ಲೆ-ನಿಮ್ಮ ಪಂಗಡ).—ಸರ್ಕಾರದವರು ಹರಿಜನರಿಗೆ ಉದಾರವಾಗಿ ಜಮೀನುಗಳನ್ನು ಕೊಡುತ್ತಿದ್ದಾರೆಂಬುದು ಹೇಗೆ ಗೊತ್ತಾಗುತ್ತದೆ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಸರ್ಕಾರದವರು ಕೊಡುತ್ತಿದ್ದಾರೆ ; ಹರಿಜನರು ಅವುಗಳನ್ನು ಅನುಭವಿಸುತ್ತಿದ್ದಾರೆ. ಇವುಗಳನ್ನೆಲ್ಲಾ ಪರಿಶೀಲಿಸಿದರೆ ಪ್ರತಿಯೊಬ್ಬರಿಗೂ ಗೊತ್ತಾಗುತ್ತದೆ.

ಶ್ರೀ ಡಿ ಗೋವಿಂದದಾಸ್‌ರವರು.—ಇದಕ್ಕೆ ಪ್ರತ್ಯೇಕವಾಗಿ ಬೇರೊಂದು ತಖ್ತೆಯನ್ನೇರ್ಪಡಿಸುವುದರಿಂದ ಹರಿಜನರಿಗೆ ಕೊಟ್ಟಿರುವುದು ಅಥವಾ ಕೊಟ್ಟಿಲ್ಲದಿರುವುದು ಸರಿಯಾಗಿ ಗೊತ್ತಾಗುತ್ತದೆಯಲ್ಲವೆ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಡಿಫೈಸ್ಡ್ ಕ್ಲಾಸಿನವರಿಗೆ ಜಮೀನು ಕೊಡುವುದಕ್ಕೇ ಬೇರೆ ಒಂದು ಪುಸ್ತಕ ಇದೆ. ಅದರ ಪ್ರಕಾರ ಕಳೆದ 3 ವರ್ಷಗಳಲ್ಲಿ 78,000 ಎಕರೆಗಳನ್ನು ಕೊಟ್ಟಿದೆಯೆಂದು ಗೊತ್ತಾಗುತ್ತದೆ.

ಶ್ರೀ ಡಿ. ಗೋವಿಂದದಾಸ್‌ರವರು.—ಹರಿಜನರಿಗೆ ಅವರ ಅರ್ಜಿಗಳಮೇಲೆ ಜಮೀನುಗಳನ್ನು ಕೊಟ್ಟಿದ್ದೂ, ಅವರು ಅದನ್ನು ಸ್ವಾಧೀನಪಡಿಸಿಕೊಳ್ಳುವುದಕ್ಕೆ ಅಡ್ಡಿಯಾಗಿ Stay order ಗಳು ಬಂದರೆ ಅವುಗಳನ್ನು ನರಿಪಡಿಸುವುದಕ್ಕೇನು ಮಾಡಿದ್ದೀರಿ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಅದು ಆಯಾ ಸಂದರ್ಭದ ಮೇಲೆ ಹೋಗುತ್ತೆ.

ಶ್ರೀ ಎಂ. ಮಾದಯ್ಯನವರು—(ಮಂಡ್ಯ ಜಿಲ್ಲೆ ನಿಮ್ಮ ಪಂಗಡ).—(c), d) ಮತ್ತು (e) ಪ್ರಶ್ನೆಗಳಿಗೆ ಉತ್ತರವಾಗಿ "not readily available" ಎಂದು ಹೇಳಿದ್ದೀರಿ. ಸರ್ಕಾರದವರ ಆಫೀಸಿನಲ್ಲಿ ಮತ್ತು ರೆವೆನ್ಯೂ ಕಮಿಷನರ್‌ರವರ ಆಫೀಸಿನಲ್ಲಿರುವ ಕೇಸುಗಳ ವಿಷಯವನ್ನಾದರೂ ತಿಳಿಸಬಹುದಾಗಿತ್ತಲ್ಲವೇ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಇದೆಲ್ಲಾ ಮೂರು ವರ್ಷದ ಲೆಕ್ಕ. ಡೆಪ್ಯುಟಿ ಕಮಿಷನರ ಕೋರ್ಟಿನಲ್ಲಿ, ರೆವೆನ್ಯೂ ಕಮಿಷನರ ಕೋರ್ಟಿನಲ್ಲಿ, ಹೀಗೆ ಪ್ರತಿಯೊಂದು ಕಡೆಯಲ್ಲೂ ಹೋಗಿ ತನಿಖೆ ನಡೆಸುವುದು ಬಹಳ ಕಾಲ ತೆಗೆದುಕೊಳ್ಳುತ್ತದೆ.

ಶ್ರೀ ಎಂ. ಮಾದಯ್ಯನವರು.—ಡೆಪ್ಯುಟಿ ಕಮಿಷನರ ಆಫೀಸಿನಿಂದೇನೋ ತರಿಸುವುದಕ್ಕೆ ಕಾಲ ಹಿಡಿಯುತ್ತದೆಂಬುದನ್ನು ಒಪ್ಪುತ್ತೇನೆ. But, I want to know why Government have not furnished information as to the number of cases pending with the Government or with the Revenue Commissioner.

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಇದು 1943ನೆಯ ಇಸವಿಯಿಂದ ಬಂದಿರುವ ಲೆಕ್ಕ. ಊಹೆಯ ಮೇಲೆ ಬರೀ ಇಷ್ಟನ ಲೆಕ್ಕಗಳನ್ನು ತೆಗೆದುಕೊಂಡು ಹೇಳುವುದು ಕಷ್ಟ.

ಶ್ರೀ ಎಂ. ಮಾದಯ್ಯನವರು. — ರೆವೆನ್ಯೂ ಕಮಿಷನರ ಕೋರ್ಟಿನಲ್ಲಿ ಎಷ್ಟು ಅಪೀಲ್ ಕೇಸುಗಳು ಅಪೂರ್ಣವಾಗಿ ವಿಚಾರಣೆಯಲ್ಲಿ ನಿಂತಿವೆ ಎಂದು ಕೇಳಿದೆ. ಅವಕ್ಕೆ ಉತ್ತರವೇನು ?

ಅಧ್ಯಕ್ಷರು.—ಯಾವ ಕಾಲದಿಂದ ಏನು ಎಂಬುದು ಯಾವುದೂ ಇಲ್ಲದಿದ್ದರೆ ಹೇಗೆ ತಿಳಿಸಲಕ್ಕಾಗುತ್ತೆ?

ಶ್ರೀ ಎಂ. ಮಾದಯ್ಯನವರು.—No separate register has been maintained ಎಂದು ತಿಳಿಸಿದ್ದಾರೆ.

ಅಧ್ಯಕ್ಷರು.—Maintained ಎಂಬ ಪದ ಅನ್ನುವುದರ ಮುಂದೆ ಏನಿದೆಯೆಂಬುದನ್ನು ನೋಡಿದರೆ ಆಗ ತಮ್ಮ ಪ್ರಶ್ನೆಗೆ ಉತ್ತರ ದೊರಕಿದ ಹಾಗಾಗುತ್ತದೆ.

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಈಗ ತಾನೆ ಆ ಪ್ರಶ್ನೆಗೆ ಉತ್ತರ ತಿಳಿಸಿದ್ದೇನೆ. ಇನ್ನೂ ಎರಡು ನಿಮಿಷಗಳಾಗಲಿಲ್ಲ. ನಿಮ್ಮ ಪಂಗಡದವರಿಗೆಂದು ಜಮೀನುಗಳನ್ನು ಕೊಡತಕ್ಕ ಬಗ್ಗೆ ಒಂದು ಅಲಾಯಿದಾ ರಿಜಿಸ್ಟ್ರನ್ನು ಇಡಲಾಗಿದೆ. ಹೆಚ್ಚು ಆಹಾರ ಬೆಳೆಯುವ ಯೋಜನೆಯ ಬಗ್ಗೆ ಜಮೀನು ಕೊಡುವುದರಲ್ಲಿ ನಿಮ್ಮ ತರಗತಿಯವರಿಗೆಷ್ಟು ಕೊಡಲಾಗಿದೆಯೆಂಬುದಕ್ಕೆ ಪ್ರತ್ಯೇಕವಾಗಿ ರಿಜಿಸ್ಟ್ರನ್ನು ಇಟ್ಟಿಲ್ಲ. ನಿಮ್ಮ ಪಂಗಡದವರಿಗೆ ಈಗಾಗಲೆ 78 ಸಾವಿರ ಎಕರೆ ಜಮೀನು ಕೊಡಲಾಗಿದೆ ಎಂಬುದಾಗಿ ತಿಳಿಸಲಾಗಿದೆ.

ಶ್ರೀ ಎಂ. ಮಾದಯ್ಯನವರು.—ಇಲ್ಲಿ ತಾವೀಗ ತಿಳಿಸಿರುವ 3 ಲಕ್ಷ 14 ಸಾವಿರ ಚಿಲ್ಲರೆ ಎಕರೆಗಳು ಈ ಜಿ. ಎಂ. ಎಫ್. ಯೋಜನೆಯಲ್ಲಿ ಎಲ್ಲಾ ಜನರಿಗೂ ಕೊಟ್ಟಿರುವ ಜಮೀನು ತಾನೆ ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಹೌದು.

ಶ್ರೀ ಎಂ. ಮಾದಯ್ಯನವರು.—ಈ ಪೈಕಿ ನಿಮ್ಮ ತರಗತಿಗಳವರಿಗೆ ಎಷ್ಟು ಎಕರೆ ಕೊಡಲಾಗಿದೆಯೆಂಬುದನ್ನು ತಿಳಿಸಲಾಗುತ್ತದೆಯೇ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಅವರಿಗೆ ಪ್ರತ್ಯೇಕವಾಗಿ ಎಷ್ಟು ಕೊಟ್ಟಿದೆಯೆಂಬುದನ್ನು ತಿಳಿಸಲಕ್ಕೆ ಈಗ ಸಾಧ್ಯವಿಲ್ಲ. ನಿಮ್ಮ ತರಗತಿಗಳವರಿಗೆ ಜಮೀನು ಕೊಡತಕ್ಕ ರೂಲ್ಸು ಪ್ರಕಾರ ಎಷ್ಟು ಕೊಡಬೇಕಾಗಿತ್ತೋ ಅಷ್ಟನ್ನೂ ಕೊಡಲಾಗಿದೆ.

ಶ್ರೀ ಎಂ. ಮಾದಯ್ಯನವರು.—ಈ ನಿಮ್ಮ ಪಂಗಡಗಳವರಿಗೆ ಜಮೀನುಗಳನ್ನು ಕೊಟ್ಟಿರುವ ಕಡೆಗಳಲ್ಲಿ ಅವರಿಗೆ ಅನಾವಶ್ಯಕವಾದ ತೊಂದರೆಗಳನ್ನು ಸರ್ಕಾರದವರು ಕೊಡುತ್ತಿರುವುದು ತಮ್ಮ ಗಮನಕ್ಕೆ ಬಂದಿದೆಯೇ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಮಾನ್ಯ ಸದಸ್ಯರು ಹೇಳತಕ್ಕ ವಿಚಾರ ನಿಜವಾದ್ದಲ್ಲ, ಆ ರೀತಿ ಎಲ್ಲೂ ನಡೆದಿಲ್ಲ.

ಶ್ರೀ ಎಂ. ಮಾದಯ್ಯನವರು.—ಈ ಜಿ ಎಂ ಎಫ್ ಯೋಜನೆಯಲ್ಲಿ ಜನರಿಗೆ ಕೊಟ್ಟಿರತಕ್ಕ ಜಮೀನುಗಳನ್ನು 5 ವರ್ಷಗಳನಂತರ, ಯಾರು ಯಾರು ಯಾವ ಯಾವ ಜಮೀನುಗಳನ್ನು ಸಾಗುವಳಿ ಮಾಡುತ್ತಿದ್ದರೋ ಆ ಯಾಯ ಜಮೀನುಗಳನ್ನು ಅವರವರಿಗೆ ಕೊಟ್ಟುಬಿಡಬೇಕೆಂಬ ನಿರ್ಧಾರಕ್ಕೆ ಪ್ರತಿಯಾಗಿ ಕೆಲವು ಕಡೆ ಜಮೀನು ಸಾಗುವಳಿ ಮಾಡುತ್ತಿಲ್ಲವೆಂಬ ಒಂದು ನೆಪದ ಮೇರೆ ಆ ಜಮೀನುಗಳನ್ನು ಖಾಯಂ ಮಾಡದಿರುವುದು ತಮ್ಮ ಗಮನಕ್ಕೆ ಬಂದಿದೆಯೇ?

ಮಾನ್ಯ ಶ್ರೀ ಎಚ್ ಸಿದ್ದಯ್ಯನವರು.—ಆಯಾಯ ಸ್ಥಳೀಯ ಅಧಿಕಾರಿಗಳು ಕಾನೂನು ರೀತ್ಯ ಕೆಲಸ ಮಾಡುತ್ತಿದ್ದಾರೆ. ಸರಿಯಾಗಿ ಸಾಗುವಳಿ ಮಾಡತಕ್ಕವರಿಗೆ ಖಾಯಂ ಮಾಡೇ ಮಾಡುತ್ತಾರೆ. ಹಾಗೆ ಸಾಗುವಳಿಯನ್ನು ಯಾರು ಮಾಡುತ್ತಿಲ್ಲವೋ ಅವರಿಗೆ ಕೊಡಕೂಡದು, ಮತ್ತು ಖಾಯಂ ಮಾಡಬಾರದೆಂಬುದಾಗಿ ಕಾನೂನಿನಲ್ಲಿ ಸ್ಪಷ್ಟವಾಗಿ ತಿಳಿಸಿದೆ. ಈ ಕೆಲವು essential conditions ಪ್ರಕಾರ ವಜಾ ಆಗಿದ್ದರೂ ಆಗಿರಬಹುದು.

ಶ್ರೀ ಎಂ. ಮಾದಯ್ಯನವರು.—ನಾನು ಕೇಳುತ್ತಿರುವುದು ಅವರು ಜಮೀನಿನಲ್ಲಿ ಬೆಳೆಯಿಟ್ಟಿದ್ದರೂ ಸಹ ಪಹಣಿ ಇತ್ಯಾದಿಗಳನ್ನು ಬರೆಯುವ ಕಾಲದಲ್ಲಿ ಏನೂ ಬೆಳೆಯಿಲ್ಲವೆಂಬುದಾಗಿ ದಾಖಲೆ ತೋರಿಸಿ, ನಂತರ ಅವರಿಂದ ಜಮೀನು ಕಿತ್ತುಕೊಳ್ಳುತ್ತಿರುವ ವಿಚಾರ ತಮ್ಮ ಗಮನಕ್ಕೆ ಬಂದಿದೆಯೇ ಎಂದು.

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಸರ್ಕಾರದವರು ಈ ವಿಷಯದಲ್ಲಿ ಆಗಿಂದಾಗ್ಯೆ review ಮಾಡತಕ್ಕ ಕಾಲದಲ್ಲಿ ಎಲ್ಲಾ ಅಂಶಗಳನ್ನೂ ಪರಿಶೀಲಿಸುತ್ತಿದ್ದರು ಆದರೆ ಅಂಥಾದ್ದು ಯಾವುದೂ ಕಂಡುಬಂದಿಲ್ಲ. ಎಲ್ಲೆಯಾದರೂ ಅಂಥಾ ಅನ್ಯಾಯಗಳು ನಡೆದಿದ್ದರೆ. ಮಾನ್ಯ ಸದಸ್ಯರು ಆದನ್ನು ನನ್ನ ಗಮನಕ್ಕೆ ತಂದರೆ ಸರಿಪಡಿಸಲಾಗುತ್ತೆ.

ಶ್ರೀ ಟಿ. ಹನುಮಯ್ಯನವರು (ಚಿತ್ರದುರ್ಗ ಜಿಲ್ಲೆ ನಿಮ್ಮ ಪಂಗಡ).—ಈ ಜಿ ಎಂ ಎಫ್ ಯೋಜನೆಯ ಬಗ್ಗೆ ಜಮೀನುಗಳಲ್ಲಿ ಆಗತಕ್ಕ ಬೆಳೆಗೆ 'ಸ್ಪೇ' ಆರ್ಡರುಗಳು ಜಿಲ್ಲಾಧಿಕಾರಿಗಳ ಮತ್ತು ರೆವೆನ್ಯೂ ಕಮಿಷನರ ಕೋರ್ಟಿನಿಂದ ಕೊಟ್ಟಿರುವುದು ತಮ್ಮ ಗಮನಕ್ಕೆ ಬಂದಿದೆಯೇ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಈ ಪ್ರಶ್ನೆಗೆ general ಆಗಿ ಒಂದು ಉತ್ತರ ಹೇಳಲು ಸಾಧ್ಯವಿಲ್ಲ. ಇದು ಆಯಾಯ ಸಂದರ್ಭಾನುಸಾರ ಹೋಗತಕ್ಕ ವಿಚಾರ.

ಶ್ರೀ ಟಿ. ಹನುಮಯ್ಯನವರು.—ಈ 'ಸ್ಪೇ' ಆರ್ಡರ್‌ಗಳನ್ನು ಕೊಡತಕ್ಕವರು ಯಾರು?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಕಾನೂನು ಪ್ರಕಾರ ಕೋರ್ಟಿನವರು ಕೊಡುತ್ತಾರೆ. ಇದು ಕಾನೂನಿಗೆ ಸಂಬಂಧಪಟ್ಟ ವಿಚಾರ.

ಶ್ರೀ ಟಿ. ಹನುಮಯ್ಯನವರು.—ಯಾರಾದರೂ ಸರ್ಕಾರಕ್ಕೆ ಅರ್ಜಿ ಹಾಕಿದರೆ, ಅದರ ನಿಮಿತ್ತವಾಗಿ ಸ್ಪೇ ಆರ್ಡರ್ ಮಾಡುತ್ತಾರೋ ಅಥವಾ ಸರ್ಕಾರದವರೇ ನೇರವಾಗಿ 'ಸ್ಪೇ' ಆರ್ಡರ್ ಕಳುಹಿಸುತ್ತಾರೋ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಹಾಗೆ ಬರಿ ಒಂದು ಅರ್ಜಿಯನ್ನು ಯಾರಾದರೂ ಕೊಟ್ಟರೆ, ಸ್ಪೇ ಮಾಡುವುದಿಲ್ಲ. ಅದಕ್ಕೆಲ್ಲಾ ಬೇಕಾದಷ್ಟು ನಿಯಮಗಳಿವೆ. It depends upon the merits of each case. ಹಾಗೆ ತಾವು ಊಹೆ ಮಾಡಿಕೊಂಡು ಕೇಳುವುದಕ್ಕೆ ಉತ್ತರ ಕೊಡುವುದಕ್ಕಾಗುವುದಿಲ್ಲ.

ಶ್ರೀ ಟಿ. ಹನುಮಯ್ಯನವರು.—ನಾನು ಕೇಳತಕ್ಕದ್ದು ಸರ್ಕಾರದವರೇ ನೇರವಾಗಿ ಕೊಡುತ್ತಾರೋ ಅಥವಾ ಎದುರು ಪಾರ್ಟಿಗಳು ಅರ್ಜಿ ಕೊಟ್ಟರೆ ಕೊಡುತ್ತಾರೋ ಎಂದು.

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಸರ್ಕಾರದವರ ಮುಂದೆ ಅಪೀಲಿದ್ದರೆ ಆಗ ಸ್ಪೇ ಮಾಡುತ್ತಾರೆ.

ಶ್ರೀ ಟಿ. ಹನುಮಯ್ಯನವರು.—ಈ ಜಮೀನು ಯಾರದು ಸ್ವಾಮೀ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಸರ್ಕಾರದವರದು.

ಶ್ರೀ ಟಿ. ಹನುಮಯ್ಯನವರು.—ಜಮೀನು ಸರ್ಕಾರದ್ದಾಗಿದ್ದರೆ ಇತರೆಯವರು ಅರ್ಜಿಹಾಕಲು ಕಾರಣವೇನು?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ತಾವು ನಿರ್ದಿಷ್ಟವಾಗಿ ಅಂಥಾದ್ದು ಯಾವುದಾದರೂ ಕೇಸುಗಳು ನಡೆದಿದೆಯೇ ಎಂಬುದನ್ನು ನನ್ನ ಗಮನಕ್ಕೆ ತೆಗೆದುಕೊಂಡು ಬನ್ನಿ; ನಂತರ ನೋಡೋಣ.

ಶ್ರೀ ಟಿ. ಹನುಮಯ್ಯನವರು.—ಹೀಗೆ ಜಿಲ್ಲಾಧಿಕಾರಿಗಳೂ, ರೆವೆನ್ಯೂ ಕಮಿಷನರೂ ಸ್ಪೇ ಆರ್ಡರು ಕೊಡುತ್ತಿರುವುದರಿಂದ ಹೆಚ್ಚು ಆಹಾರ ಬೆಳೆಯಲು ತೊಂದರೆಯಾಗಿರುತ್ತೆಂಬುದು ತಮ್ಮ ಗಮನಕ್ಕೆ ಬಂದಿದೆಯೇ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಇಲ್ಲ.

ಶ್ರೀ ಟಿ. ಹನುಮಯ್ಯನವರು.—ಇಂಥಾ ಕೇಸುಗಳನ್ನು ತಕ್ಷಣ ಫೈಸಲ್ ಮಾಡಲು ಕಾರ್ಯಕ್ರಮಗಳನ್ನು ತೆಗೆದುಕೊಳ್ಳುತ್ತೀರಾ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಈಗ ಆದಷ್ಟು ಬೇಗ ಬೇಗ ಕೇಸುಗಳನ್ನು ತೀರ್ಮಾನ ಮಾಡಲಾಗುತ್ತಿದೆ.

ಶ್ರೀ ಟಿ. ಹನುಮಯ್ಯನವರು.—ಎರಡು ಮೂರು ವರ್ಷಗಳಾದರೂ ತೀರ್ಮಾನವಾಗದೆ ನಿಂತಿರುವುದು ತಮ್ಮ ಗಮನಕ್ಕೆ ಬಂದಿದೆಯೇ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ವಿಶೇಷ ಸಂದರ್ಭಗಳು ಇಲ್ಲದ ಏನಾ ಹಾಗೆ ನಿಲ್ಲಲು ಕಾರಣವಿಲ್ಲ.

Tanks in Kunigal Taluk under which Acreage Cess is collected.

* ಪ್ರಶ್ನೆ 238.—ಶ್ರೀ ಎಚ್. ಹುಚ್ಚಮಾಸ್ತಿಗೌಡರು (ತುಮಕೂರು ಜಿಲ್ಲೆ).—

ಈ ಕೆಳಗೆ ಕೇಳಿರುವ ಸಂಗತಿಗಳನ್ನು ಸರ್ಕಾರದವರು ದಯೆಯಿಟ್ಟು ತಿಳಿಸಬೇಕೆಂದು ಪ್ರಾರ್ಥನೆ.—

(a) ಕುಣಿಗಲು ತಾಲ್ಲೂಕಿನಲ್ಲಿರುವ ಯಾವ ಯಾವ ಕೆರೆಗಳ ಅಚ್ಚು ಕಟ್ಟಿನ ಪ್ರದೇಶದಲ್ಲಿರುವ ಅಚ್ಚು ಕಟ್ಟು ದಾರರುಗಳಿಂದ ಎಕರೆವಾರು ಸೆಸ್ಸನ್ನು ವಸೂಲ್ಮಾಡಲಾಗುತ್ತಿದೆ;

(b) ಒಂದೊಂದು ಕೆರೆಯ ಅಚ್ಚುಕಟ್ಟು ಪ್ರದೇಶದಲ್ಲಿಯೂ ವಸೂಲ್ಮಾಡಿರುವ ಎಕರೆವಾರು ಸೆಸ್ಸು ಮೊಬಲಗೆಷ್ಟು;

(c) ಎಕರೆವಾರು ಸೆಸ್ಸನ್ನು ವಸೂಲ್ಮಾಡಿರುವ ಕೆರೆಗಳಿಗೆ ಮಣ್ಣಿನ ಕಾಮಗಾರಿ ಕೆಲಸಗಳನ್ನು ನಡೆಯಿಸಲಾಗಿದೆಯೇ;

(d) ಒಂದೊಂದು ಕೆರೆಯ ವಿಷಯದಲ್ಲಿಯೂ ವೆಚ್ಚ ಮಾಡಿರುವ ಮೊಬಲಗೆಷ್ಟು?

ಉತ್ತರ.—ಮಾನ್ಯ ಶ್ರೀ ಎಚ್. ಸಿದ್ದಯ್ಯನವರು (ರೆವೆನ್ಯೂ ಮತ್ತು ಎಕ್ಸೈಜು ಶಾಖೆಗಳ ಸಚಿವರು).—

(a) 1 ಅಮ್ಮತೂರು ದೊಡ್ಡಕೆರೆ ಮತ್ತು ಚಿಕ್ಕ ಕೆರೆ
2 ಹೊಳಲಗುಂದಕೆರೆ
3 ಕೊಡಗಿಹಳ್ಳಿಕೆರೆ
4 ಹೊನಕೆರೆ ಗ್ರಾಮದ ಕೆರೆ
5 ಜಿನ್ನಗರ ಕೆರೆ
6 ಸಣಬಕೆರೆ
7 ದೀಪಾಂಬುಧಿಕೆರೆ
8 ಕಂಪಾಂಬುಧಿಕೆರೆ
9 ಕಿಟ್ನಮಂಗಲ ಅಮಾನಿಕೆರೆ

(b)

	ರೂ.	ಆ.	ಪೈ	
1.	280	14	5	ಮೇಲ್ಕಂಡ ಕೆರೆಗಳಲ್ಲಿ ಪ್ರತಿ ಎಕರೆಯ ಮೇಲೆ ವಸೂಲಾಗಿರುವ ಸೆಸ್ಸು.
2.	123	7	9	
3.	69	13	6	
4.	43	12	6	
5.	100	12	6	
6.	115	0	10	
7.	648	0	0	
8.	154	0	0	
9.	167	1	7	

(c) ಇಲ್ಲ.

(d) ಇಲ್ಲಿಯವರೆಗೂ ಯಾವ ಮೊಬಲಗನ್ನೂ ವೆಚ್ಚ ಮಾಡಿಲ್ಲ. ಎಗ್ಸಿಕ್ಯುಟಿವ್ ಇಂಜಿನಿಯರವರಿಂದ ಅಂದಾಜುಗಳು ಬಂದಾಗ ಅವಕ್ಕೆ ಒಪ್ಪಿಗೆ ರುಜು ಹಾಕಿ, ಅವುಗಳನ್ನು ಈ ನಿಧಿಗೆ ಖರ್ಚುಹಾಕುವಂತೆ ಅಪ್ಪಣೆ ಮಾಡಿ ಕಳುಹಿಸಿಕೊಡರಾಗುವುದು.

ಶ್ರೀ ಎಚ್. ಹುಚ್ಚಮಾಸ್ತಿ ಗೌಡರು.—ಇಲ್ಲಿ ತಾವು ತಿಳಿಸಿರತಕ್ಕ ಒಂಬತ್ತು ಕೆರೆಗಳ ಕೆಳಗೆ ಏಕರೇಜ್ ಸೆಸ್ಸನ್ನು ಎಷ್ಟು ವರ್ಷಗಳಿಂದ ವಸೂಲು ಮಾಡುತ್ತಿದ್ದೀರಿ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ನೋಟೀಸ್.

ಶ್ರೀ ಎಚ್. ಹುಚ್ಚಮಾಸ್ತಿಗೌಡರು.—ಹಾಗೆ ಏಕರೇಜ್ ಸೆಸ್ಸನ್ನು ತೆಗೆದುಕೊಂಡರೆ ಈ ಮಟ್ಟಿ ಕಾಮಗಾರಿಯನ್ನು ನಡೆಸುವುದು ಯಾರ ಜವಾಬ್ದಾರಿ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಸರ್ಕಾರದ ವರದು.

ಶ್ರೀ ಎಚ್. ಹುಚ್ಚಮಾಸ್ತಿಗೌಡರು.—ಹಾಗೆ ಮಟ್ಟಿ ಕಾಮಗಾರಿಯನ್ನು, ಸೆಸ್ಸನ್ನು ತೆಗೆದುಕೂಂಡು ನಹ ನಡೆಸದಿದ್ದರೆ, ಅದರ ಲುಕ್ಸಾನಿಗೆ ಸರ್ಕಾರದವರು ಜವಾಬ್ದಾರರಲ್ಲವೇ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಹಾಗೆ ಹೇಳುವುದಕ್ಕಾಗುವುದಿಲ್ಲ. ಇದು ಅನೇಕ ಸಂದರ್ಭದಲ್ಲಿ ಒಂದೊಂದು ರೀತಿಯಾಗಿರುತ್ತೆ. ಆಯಾಯ ಸಂದರ್ಭಗಳಿಗನುಸಾರವಾಗಿ ಹೋಗುತ್ತೆ.

ಶ್ರೀ ಎಚ್. ಹುಚ್ಚಮಾಸ್ತಿಗೌಡರು.—30 ವರ್ಷಗಳಿಂದ ಕೆರೆಗಳು ನಾದುರಸ್ತಾಗಿದ್ದರೆ, ಅವುಗಳಿಗೆ ಸರಿಯಾದ ದುರಸ್ತಿ ಸರ್ಕಾರದವರು ಮಾಡದಿದ್ದರೆ, ಅದಕ್ಕೆ ಆಗತಕ್ಕ ಲುಕ್ಸಾನಿಗೆ ಸರ್ಕಾರದವರೇ ತಾನೆ ಜವಾಬ್ದಾರರು?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಎಲ್ಲಾ ಕೆರೆಗಳ ಮೇಲೆ ಪ್ರಶ್ನೆ ಹಾಕುತ್ತಿದ್ದರೆ. ಉತ್ತರ ಹೇಳುವುದಕ್ಕೆ ಸಾಧ್ಯವಿಲ್ಲ.

ಶ್ರೀ ಎಚ್. ಹುಚ್ಚಮಾಸ್ತಿಗೌಡರು.—ಹಿಂದೆ ಕೆರೆಗಳ ರಿಪೇರಿ ಬಗ್ಗೆ ಚಿರ್ಚೆ ಆಗುತ್ತಿದ್ದಾಗ ಈ ಏಕರೇಜ್ ಸೆಸ್ಸಿಗೆ ಸರ್ಕಾರದವರೂ ಸ್ವಲ್ಪ ದುಡ್ಡು ಹಾಕಿ ಕೆಲಸ ಮಾಡಿಸುತ್ತಿರುವುದಾಗಿ ಆಗ ಉತ್ತರ ಕೊಡಲಾಗಿತ್ತು. ಹಾಗೆ ಈ ಕೆರೆಗಳ ಕೆಲಸವನ್ನು ತಕ್ಷಣ ಮಾಡಿಸುತ್ತೀರಾ?

ಮಾನ್ಯ ಶ್ರೀ ಎಚ್. ಸಿದ್ದಯ್ಯನವರು.—ಆಗ ರಿಪೇರಿ ಅಗತ್ಯವಾಗಿಯಾವ ಯಾವ ಕೆರೆಗಳಿಗೆ ಬೇಕಾಗಿತ್ತೋ ಆ ಕೆರೆಗಳಿಗೆ ಸಂಬಂಧಪಟ್ಟ ಉತ್ತರ ಆಗ ತಿಳಿಸಿದ್ದೇನೆ.

Self-Sufficiency in Food.

*Q.—15. Sri H. C. LINGA REDDY (Kolar District—General).—

Will the Government be pleased to state:—

(*a*) the steps taken by them to make the State self-sufficient in food;

(*b*) the number of acres of land that are brought under cultivation in pursuance of the Grow More Food scheme introduced to make the country self-sufficient;

(*c*) how long it will take to make the State self-sufficient in food:

(*d*) the extent of deficit in food and how the same is proposed to be met pending completion of the stage of self-sufficiency?

A.—The Hon'ble Sri T. MARIAPPA (Home Minister).—

(*a*) A Three-year plan to Grow More Food has been drawn up and a

(THE HON'BLE SRI T. MARIAPPA.)

separate department namely the Department of Food Production is started from 1949 to execute the several schemes formulated in the plan.

	Year.	*Area.*
(*b*)	1949-50	... 24,653 acres.
	1950-51	... 17,786 ,, virgin and fallow lands.
	1950-51	... 20,518 acres of new lands.

(*c*) Expected to be self-sufficient by 31st March 1952 as per the three year plan.

(*d*) (i) The estimated total deficit at the beginning of the three-year Food Production Programme was 2,41,554 tons (Two lakhs forty-one thousand and five hundred and fifty-four tons) of foodgrains.

(ii) The schemes under the Grow More Food are under several stages of progress. All the schemes will be fully implemented before March 1952. Till the stage of self-sufficiency is reached, the deficit has to be met out of the imported foodgrains.

Sri H. C. LINGA REDDY.—How long ago was this three-year programme of food production introduced ?

The Hon'ble Sri T. MARIAPPA.—The whole programme was drawn up in 1949-50.

Sri H. C. LINGA REDDY.—You have been pleased to say that a certain number of acres of land has been brought under the plough under the Grow More Food scheme. What is the actual production in the shapeof grains ? How many pallas have been grown ?

The Hon'ble Sri T. MARIAPPA.—I want notice.

Sri H. C. LINGA REDDY.—Can at least a rough estimate be given ?

The Hon'ble Sri T. MARIAPPA—I want notice.

Sri H. C. LINGA REDDY—What is the cost of the scheme ?

The Hon'ble Sri T. MARIAPPA.—The details of the scheme have already been distributed to the Hon'ble Members during the last Session. The cost varies from year to year, 1949-50, 1950-51 and 1951-52.

Sri H. C. LINGA REDDY.—You have been pleased to state in the answer that the deficit will be to the extent of 2,42,000 tons. How do you propose to meet this deficit at the beginning of the scheme ?

The Hon'ble Sri T. MARIAPPA.—In fact the Hon'ble Members will observe from a persual of the scheme that we have calculated the deficit in 1950 to be 2,41,000 tons. Therefore the plans have been drawn up on the basis of stepping up food production to meet the deficit in the course of three years. If seasonal conditions are normal and if all the irrigation works are completed by 1952 March, we expect the deficit to be covered.

Sri H. C. LINGA REDDY—What assistance you expect from the Centre ?

The Hon'ble Sri T. MARIAPPA.—In consultation with the Centre the scheme has been drawn up. The Centre has agreed to give us grants and loans to implement the scheme.

Sri H. C. LINGA REDDY—I wanted to know the quantity of food grains that the Centre will be giving to the State ?

The Hon'ble Sri T. MARIAPPA.—In fact the Centre has stipulated the condition that by the end of 1952 we should not ask for any imports.

Sri H. C. LINGA REDDY.—I just wanted to know the quantity of food grains that the Centre has promised to give to meet the deficit in the State.

The Hon'ble Sri T. MARIAPPA.—Only this year they are giving 75,000 tons; last year they gave 96,000 tons; and perhaps next year they may further reduce the quantity on the expectation that the internal production must be stepped up.

ಶ್ರೀ ಬಿ. ಹುಚ್ಚೇಗೌಡರು (ತುಮಕೂರು ಜಿಲ್ಲೆ).—1950ನೆಯ ಇಸವಿಯಲ್ಲಿ 2,41,000 ಟನ್ ಡಿಫಿಸಿಟ್ ಎಂದು ಹೇಳಿದಿರಿ. ಈ ವರ್ಷ ಎಷ್ಟು ಡಿಫಿಸಿಟ್ ಇದೆ ?

The Hon'ble Sri T. MARIAPPA.—On the basis of the existing issue of rations,—the Hon'ble Member will kindly see from the pamphlets that we have distributed—on the overall ration of 12 ounces per adult in the urban areas and 16 ounces per adult in the rural areas, for a population of

80·5 lakhs the deficit arrived at is 2,41,000 tons.

Sri B. HUTCHE GOWDA.—According to the present calculations what is the probable deficit ?

The Hon'ble Sri T. MARIAPPA.—The Hon'ble Member is aware that the population of the State has increased by another 10 lakhs.

ಶ್ರೀ ಬಿ. ಹುಚ್ಚೇಗೌಡರು.—ಜನಸಂಖ್ಯೆ ಈಗ ಹಿಂದಿನ ಮೂರು ವರ್ಷಗಳಲ್ಲಿದ್ದುದಕ್ಕಿಂತ ಇನ್ನೂ ಹೆಚ್ಚಾಗಿದೆ. ಈಗ ಡಿಫಿಸಿಟ್ ಬಹಳವಿದೆಯೆಂದು ಹತ್ತಾರುಸಾರಿ ಹೇಳಿದ್ದೀವೆ.

The Hon'ble Sri T. MARIAPPA.—No Sir, there seems to be some confusion regarding this particular deficit mentioned here and deficit in respect of which we get allotment of foodgrains. That is on the basis of 9 ounces. On the basis of the existing scale of rations, the off-take in the urban areas where there is statutory rationing, is 10,000 tons per month and in the rural areas about 16,000 tons. On this basis we have calculated and they are going to make allotments. But this figure is based on the requirements for a population of 80·5 lakhs and we have calculated the deficit to be 2,41,000 tons. This has nothing to do with the deficit which we have to meet in the course of the day-to-day administration.

ಶ್ರೀ ಬಿ. ಹುಚ್ಚೇಗೌಡರು.—ಮೂರು ವರ್ಷದಲ್ಲಿ ನೀರಾವರಿ ಕಾಮಗಾರಿಗಳನ್ನು ಮುಗಿಸಿದರೆ ಡಿಫಿಸಿಟ್ ನರಿಪಡಿಸಬಹುದೆಂದು ಹೇಳಿತ್ತು. ಅದರಂತೆ ಭರವಸೆಯಿದೆಯೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—1952ನೆಯ ಇಸವಿ ಮಾರ್ಚಿ ಅಥವಾ ಜೂನ್‌ನಲ್ಲಿ ಮುಗಿಸಬೇಕೆಂದು ಕಾರ್ಯಕ್ರಮವನ್ನು ಹಾಕಿರುವುದನ್ನು ಮುದ್ರಣ ಮಾಡಿಸಿ ಹಂಚಿದೆ ಮತ್ತು ಪ್ರೆಸ್ ಸ್ಟೇಟ್‌ಮೆಂಟ್ ನಹ ಕೊಟ್ಟಿದೆ.

ಶ್ರೀ ಬಿ. ಹುಚ್ಚೇಗೌಡರು.—ಈ ಕಾರ್ಯಕ್ರಮಕ್ಕೆ ಬಡ್ಜೆಟ್ಟಿನಲ್ಲಿ ಹಣ ಒದಗಿಸರಾಗಿದೆಯೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಒದಗಿಸಿದೆ. 1949-50 ರಲ್ಲಿ ನೀರಾವರಿ ಕಾಮಗಾರಿಗಳಿಗೆ ಒಂದು ಕೋಟಿ ಏಳು ಲಕ್ಷ ರೂಪಾಯಿಗಳನ್ನೊದಗಿಸಿತ್ತು.

ಶ್ರೀ ಎಲ್. ಎಚ್. ತಿಮ್ಮಾಬೋಯಿಯವರು (ಚಿಕ್ಕಮಗಳೂರು ಜಿಲ್ಲೆ—ನಿಮ್ನ ಪಂಗಡ).—1949 ರಿಂದ 1951ರ ವರೆಗೆ ಎಷ್ಟು ಎಕರೆ ತರಿ ಆಗಿದೆಯೆಂದು ಹೇಳಲು ಸಾಧ್ಯವೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನೋಟೀಸ್

ಶ್ರೀ ಎಲ್. ಎಚ್. ತಿಮ್ಮಾಬೋಯಿಯವರು.—1949-50 ರಲ್ಲಿ ದೇಶದ ಆದ್ಯಂತ ಒಟ್ಟು ಎಷ್ಟು ಎಕರೆ ತರಿ ಇತ್ತು ?

The Hon'ble Sri T. MARIAPPA.—I want notice for correct figures. Sir, we have taken the average at 7,75,000 acres of wet lands as being the area that can be brought under wet cultivation making allowance for failure of rains in certain parts and other contingencies.

Sri L. H. THIMMA BOI.—I am asking for the extent of land that was actually brought under wet cultivation during the years 1950–51 and 1949-50 ?

The Hon'ble Sri T. MARIAPPA.—I want notice.

ಶ್ರೀ ಎಲ್. ಎಚ್. ತಿಮ್ಮಾಬೋಯಿಯವರು.—1948–49 ಕ್ಕಿಂತ 1950-51 ರಲ್ಲಿ ತರಿ ಜಮೀನು ಇದ್ದುದು ಕಡಿಮೆಯಲ್ಲವೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಆ ವಿಚಾರ ಅನೇಕ ಸಾರಿ ಈ ಸಭೆಯಲ್ಲಿ ಹೇಳಿದ್ದೇನೆ. ತರಿ ಕಡಿಮೆಯಾಗಿದೆಯೆಂದು ಹೇಳಬಾರದು. ಮಳೆಯು ಕಾಲಕ್ಕೆ ನರಿಯಾಗಿ ಸಾಕಷ್ಟು ಬೀಳದಿದ್ದರೆ ಸಾಗುವಾಡುವುದು ಕಡಿಮೆಯಾಗುತ್ತದೆ. ಕೆರೆ ತುಂಬದಿದ್ದರೆ ಬೆಳೆ ಬರುವ ಅಂದಾಜಿನಲ್ಲಿ ಆ ಜಮೀನು ಲೆಕ್ಕಕ್ಕೆ ಸೇರುವುದಿಲ್ಲ.

ಶ್ರೀ ಎಲ್. ಎಚ್. ತಿಮ್ಮಾಬೋಯಿಯವರು.—1948-49 ರಲ್ಲಿ ಎಷ್ಟು ತರಿ ಜಮೀನು ಸಾಗಾಗಿತ್ತೋ ಅದಕ್ಕಿಂತ 1950-51 ರಲ್ಲಿ, ಸಾಗಾಗಿರುವ ತರಿ ಜಮೀನು ಕಡಿಮೆಯಲ್ಲವೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅದು seasonal condition ಮೇರೆ ಹೋಗುತ್ತದೆ.

Sri L. H. THIMMA BOI.—Is it not a difficult problem to meet the deficit ?

The Hon'ble Sri T. MARIAPPA.—It is not at all a difficult problem. If all the irrigation works are completed, I am pretty certain that in the course of a year or two we can grow enough foodgrains for Mysore.

Mr. SPEAKER.—Question time is over.

Statement by the Hon'ble Speaker. *re.*— Notice of questions pertaining to Speaker's establishment.

Mr. SPEAKER (The Hon'ble Sri V. Venkatappa).—Sri B. N. Boranna Gowda has given notice of a question relating to the number of questions received and the number discussed. This question is included in the list of starred questions, as question No. 203. It is a well-known parliamentary convention that questions relating to the Speaker's establishment or dealing with matters within the jurisdiction of the Speaker should be addressed to the Speaker by private notice. No written